ಸಂಪುಟ : 8 ಸಂಚಿಕೆ : 239 ಪುಟ : 4 ಬೆಲೆ : 3.00 ರವಿವಾರ ಅಕ್ಟೋಬರ್ 29, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 239 Pages : 4 Price : 3.00 Sunday October 29, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಜಿಲ್ಲಾಡಳಿತ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಸಂಕನೂರ ಕರೆ

# ರಾಮಾಯಣದ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ



> ಮಹಾತ್ಮ ಗಾಂಧೀಜಿಯವರು ಕೂಡ ರಾಮಾಯಣದಿಂದ ಪ್ರಭಾವಿತರಾಗಿ ರಾಮ ರಾಜ್ಯದ ಕನಸು ಕಂಡಿದ್ದರು. ರಾಮಾಯಣ, ಹಾಗೂ ವಾಲ್ಮೀಕಿ ಅವರ ಜೀವನದ ತತ್ವಾದರ್ಶಗಳನ್ನು ಅರಿತುಕೊಂಡು ಆದರ್ಶ, ಸುಂಸ್ಕೃತ ಜೀವನ ನಡೆಸಬೇಕು. ವ್ಯಕ್ತಿ ಸುಂಸ್ಕೃತವಾದರೆ ಸಮಾಜ ಸುಧಾರಣೆಯಾಗುತ್ತದೆ. ಆದ್ದರಿಂದ ರಾಮಾಯಣವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
>
> **–ಎಸ್.ವಿ.ಸಂಕನೂರ,** ವಿಧಾನ ಪರಿಷತ್ ಸದಸ್ಯರು.

ಕಾರ್ಯಕ್ರಮಕ್ಕೂ ಮುನ್ನ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ನೀಡಿದ ಶುಭಾಶಯದ ಸಂದೇಶವನ್ನು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಪ್ರಶಾಂತ ವರಗಪ್ಪನವರ ವಾಚಿಸಿದರು.



**■ ವಿಜಯಸಾಕ್ಷಿ ಸುದ್ದಿ, ಗದಗ**

ಮಹರ್ಷಿ ವಾಲ್ಮೀಕಿ ಅವರು ರಚಿಸಿದ ರಾಮಾಯಣವನ್ನು ಪ್ರತಿಯೊಬ್ಬರು ಓದಿ ಅದರಲ್ಲಿನ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿಧಾನ ಪರಿಷತ ಸದಸ್ಯ ಎಸ್.ವಿ.ಸಂಕನೂರ ಹೇಳಿದರು.

ಅವರು, ಜಿಲ್ಲಾಡಳಿತ ಭವನದಲ್ಲಿ ಶನಿವಾರದಂದು ಜರುಗಿದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ದೇಶದ ಇತಿಹಾಸದಲ್ಲಿ ಪ್ರಥಮವಾಗಿ ಕಾವ್ಯ ರೂಪದಲ್ಲಿರುವ ದೊಡ್ಡ ಗ್ರಂಥ ರಾಮಾಯಾಣ. ಇದು ಪ್ರಥಮ ಗ್ರಂಥವಾಗಿದ್ದು, ಇದನ್ನು ರಚಿಸಿದ ಮಹರ್ಷಿ ಅವರನ್ನು ಆದಿಕವಿ ಎನ್ನುತ್ತೇವೆ ಎಂದು ಸಂಕನೂರ ತಿಳಿಸಿದರು.

ವಾಲ್ಮೀಕಿ ಅವರ ಜೀವನ ಚರಿತ್ರೆ ನಾವು ಅರಿತುಕೊಳ್ಳಬೇಕು. ಅವರ ಜೀವನದಲ್ಲಿ ನಡೆದಂತಹ ಘಟನೆಯನ್ನು ನೆನಪಿಸಿಕೊಳ್ಳುತ್ತಾ ಅವರ ಜೀವನ ನಿರ್ವಹಣೆಗಾಗಿ ಮಾಡುತ್ತಿದ್ದ ಬೇಟೆಗಾರಿಕೆ ವೃತ್ತಿಯಿಂದ ಮಹರ್ಷಿಗಳು ಹೇಗಾದರು ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಮನುಷ್ಯ ಸಹಜವಾಗಿ ತಪ್ಪುಗಳನ್ನು ಮಾಡುತ್ತಾನೆ. ಆ ತಪ್ಪುಗಳನ್ನು ತಿದ್ದಿ ನಡೆಯುವುದೇ ಮುಖ್ಯ. ನಾರದ ಮುನಿಗಳ ಹಿತೋಪದೇಶದಿಂದ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವ ಮೂಲಕ ಬದಲಾದ ರತ್ನಾಕರರು ಮಹರ್ಷಿ ವಾಲ್ಮೀಕಿಯಾದರು. ಅವರು ರಚಿಸಿದ ರಾಮಾಯಣ ಇಂದು ಪ್ರತಿಯೊಬ್ಬರು ಓದಬೇಕು ಅದರಲ್ಲಿನ ಅಣ್ಣ-ತಮ್ಮ, ಗಂಡ-ಹೆಂಡತಿಯ ಸಂಬಂಧಗಳ ಕುರಿತು ಉಲ್ಲೇಖಿಸಲಾಗಿದ್ದು, ಇದನ್ನು ಅರಿತು ನಾವು ಜೀವನ ನಡೆಸಬೇಕು. ರಾಮಾಯಣವನ್ನು ಮುಖ್ಯವಾಗಿ ಜನಪ್ರತಿನಿಧಿಗಳು ಇದನ್ನು ಓದಿ ಅರಿತುಕೊಂಡು ರಾಜ ತನ್ನ ಸಾಮ್ರಾಜ್ಯದ ಪ್ರಜೆಗಳ ಜೊತೆ ಯಾವ ರೀತಿ ಸಂಬಂಧಗಳನ್ನು ಹೊಂದಿರಬೇಕು ಎಂಬುದನ್ನು ಅರಿತುಕೊಳ್ಳಬೇಕಾಗಿದೆ ಎಂದರು.

ಇಂದಿನ ಆಧುನಿಕ ಯುಗದಲ್ಲಿ ವಿದ್ಯೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ವಿದ್ಯೆಯಿಂದ ಸಮಾಜದಲ್ಲಿನ ಅಸಮಾನತೆ ದೂರ ಮಾಡಬಹುದು. ಸರ್ಕಾರಗಳು ಇಂದು ಪರಿಶಿಷ್ಟರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದು, ಪ್ರತಿಯೊಬ್ಬರು ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆಗೇರಬೇಕು. ಈ ಕುರಿತು ಪಾಲಕರು ▶▶ 3ನೇ ಪುಟಕ್ಕೆ

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ದಿ.28-10-2023 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು. **ಸ್ಥಳಗಳ ವಿವರ:** ವಾರ್ಡ್ ನಂ. 30, 34, 35 ಈ ಡಬ್ಲ್ಯೂ ಎಸ್, ವಡ್ಡರಿಗೇರಿ 45 ಪ್ಲಾಟ್, ಕುಂಚಿ ಕೊರವರ ಓಣಿ, ಮೂರು ಶಿಳ್ಳಿನ ವಕಾರ, ಬಸ್ ಡಿಪೋ ಹಿಂದಿನ ಭಾಗ, ಶಿವಾನಂದ ಗಾರ್ಡನ್, ವಾರ್ಡ್ ನಂ. 22 ಶುದ್ಧ ನೀರು ಬಲಭಾಗಕ್ಕೆ ಭಾಗ1,2,3,4,5. ವಾರ್ಡ್ ನಂ 22 ಅಕ್ಕಿಯಾರ್ ಲೈನ್, ಕಾಂಬಳೆ ಲೈನ್, ಗಾರ್ಡನ್ ಲೈನ್, ಸ್ವಾಮಿಯ ಲೈನ್, ಶುದ್ಧ ನೀರು ಘಟಕದ ಲೈನ್, ಸಫಾಯಿಯವರ ಲೈನ್, ನಿಂಗಪ್ಪನವರ ಲೈನ್, ವಾಯ್ಯದಾರ ಲೈನ್ ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 5,6 ಪಿಪಿ ಗುಡಿ ಲೈನ್, ಮುಸ್ಕಿನ ಪ್ಲಾಟ್, ರೇಣುಕಾಚಾರ್ಯ ಕಲ್ಯಾಣ ಮಂಟಪ, ಹನುಮಂತನ ಗುಡಿ ಲೈನ್, ಬಾಳಿಕಾಯಿ ಹೊನ್ನಪ್ಪ ಪಾಟೀಲ್ ಪಂಚಲಕ್ಷ್ಮಿ ಬಡಾವಣೆ.

ವಾರ್ಡ್ ನಂ. 29 ರಾಜೀವ ಗಾಂಧಿ ನಗರ ಭಾಂಡಗೆ ಲೈನ್, ಪೊಲೀಸ್ ಸ್ಟೇಷನ್ ಮೇಲಿನ ಭಾಗ, ಸ್ವಿಮ್ಮಿಂಗ್ ಪೂಲ್, ಕೊಪ್ಪಳದವರ ಲೈನ್, ಕಲಾಮಂದಿರ ರೋಡ್. ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ ಮೇಲಿನ ಭಾಗಗಳು ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಮನವಿ ಮಾಡಿದ್ದಾರೆ.

### ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ನಾಗೇಂದ್ರ ಆರೋಪ

# ಬರ ನಿಭಾಯಿಸುವಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ವಿಫಲ



> ಸರ್ಕಾರಗಳು ರೈತ ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸುತ್ತವೆ. ಆದರೆ, ಅವು ಮುಕ್ತ ಮಾರುಕಟ್ಟೆಯಲ್ಲಿ ಜಾರಿಗೆ ಬರುವುದಿಲ್ಲ. ಹಬ್ಬ ಹರಿದಿನಗಳಲ್ಲಿ ನೌಕರರಿಗೆ ಆಫರ್ ನೀಡುತ್ತಾರೆ. ದೇಶಕ್ಕೆ ಅನ್ನ ಹಾಕುವ ರೈತನಿಗೆ ಸರ್ಕಾರದಿಂದ ಇದುವರೆಗೂ ಯಾವುದೇ ಆಫರ್ ನೀಡಿಲ್ಲ. ಅಷ್ಟೇ ಯಾಕೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ 2019 ರಿಂದ ಸಂಪೂರ್ಣವಾಗಿ ವಿಫಲವಾಗಿದೆ.
>
> **–ನಾಗೇಂದ್ರ, ಅಧ್ಯಕ್ಷರು,** ಕರ್ನಾಟಕ ರಾಜ್ಯ ರೈತ ಸಂಘ.

**■ ವಿಜಯಸಾಕ್ಷಿ ಸುದ್ದಿ, ಗದಗ**


ರಾಜ್ಯದಲ್ಲಿ ಹಿಂದೆಂದೂ ಕಾಣದಂತಹ ಭೀಕರ ಬರಗಾಲ ಪರಿಸ್ಥಿತಿ ಎದುರಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರ ಹಿತ ಕಾಪಾಡುವಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ನಾಗೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಗಾರು ಹಾಗೂ ಹಿಂಗಾರು ಮಳೆ ಕೊರತೆಯಿಂದಾಗಿ ರಾಜ್ಯದ 200ಕ್ಕೂ ಹೆಚ್ಚು ತಾಲೂಕುಗಳು ತತ್ತರಿಸಿ ಹೋಗಿವೆ. ಜಲಾಶಯಗಳಲ್ಲಿ ನೀರು ಇಲ್ಲ, ಕೆರೆ, ಬಾವಿಗಳಲ್ಲಿಯೂ ನೀರು ಖಾಲಿಯಾಗಿವೆ. ಹಳ್ಳಿಗಳಲ್ಲಿ ಕೆಲಸವಿಲ್ಲದೆ ಕೂಲಿಕಾರರು ದೊಡ್ಡ ದೊಡ್ಡ ಪಟ್ಟಣಗಳಿಗೆ ಗುಳೆ ಹೋಗುತ್ತಿದ್ದಾರೆ. ಜೊತೆಗೆ, ದನ-ಕರುಗಳಿಗೆ ಮೇವು ಕೂಡ ಇಲ್ಲ. ಹೀಗಿದ್ದರೂ ಸರ್ಕಾರ ಕಣ್ಣು ತೆರೆಯುತ್ತಿಲ್ಲ ಎಂದು ಆರೋಪಿಸಿದರು.

ಹಿಂದಿನ ಬಸವರಾಜ್ ಬೊಮ್ಮಾಯಿ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ ರೈತರಿಗೆ ಏಳು ಗಂಟೆಗಳ ವಿದ್ಯುತ್ ಪೂರೈಕೆ ಮಾಡುತ್ತಿತ್ತು. ಆದರೆ, ಈಗಿರುವ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಉಚಿತ ವಿದ್ಯುತ್ ನೀಡುವ ನೆಪದಲ್ಲಿ 2ತಾಸು ವಿದ್ಯುತ್ ಕಡಿತಗೊಳಿಸಿ ರೈತರಿಗೆ ಕೇವಲ 5ತಾಸು ಮಾತ್ರ ವಿದ್ಯುತ್ ಪೂರೈಕೆ ಮಾಡುತ್ತಿದೆ. ಅದು ಕೂಡ ಕೆಲವು ಜಿಲ್ಲೆಗಳಲ್ಲಿ ರಾತ್ರಿ ಹೊತ್ತು ವಿದ್ಯುತ್ ನೀಡುತ್ತಿರುವುದರಿಂದ ಕತ್ತಲಲ್ಲಿ ರೈತರು ನೀರು ಹಾಯಿಸುವ ಪರಿಸ್ಥಿತಿ ಎದುರಾಗಿದೆ. ಎಷ್ಟೋ ಜನ ರೈತರು ರಾತ್ರಿ ಹೊತ್ತು ಹಾವು ಕಡಿದು ಸತ್ತ ಉದಾಹರಣೆಗಳು ಇವೆ. ಕೂಡಲೇ ರೈತರಿಗೆ ಹಗಲಿನಲ್ಲಿ ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಚಾಮಸ ಮಾಲಿಪಾಟೀಲ, ಮಂಜುಳಾ ಅಕ್ಕಿ, ರವಿ, ಮುತ್ತನಗೌಡ ಚೌಡರೆಡ್ಡಿ, ಮಹಾದೇವ, ಚಂದ್ರಕಾಂತ ಉಳ್ಳಾಗಡ್ಡಿ, ಸೇರಿದಂತೆ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

## ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಜಿಲ್ಲಾ ಪ್ರವಾಸ



**■ ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಅಕ್ಟೋಬರ್ 29 ರ ಭಾನುವಾರದ ಪ್ರವಾಸದ ವಿವರ ಇಂತಿದೆ.

ಅಕ್ಟೋಬರ್ 29 ಭಾನುವಾರದಂದು ಬೆಳಗ್ಗೆ 8 ಗಂಟೆಗೆ ಹುಬ್ಬಳ್ಳಿಯಿಂದ ರಸ್ತೆ ಮಾರ್ಗವಾಗಿ ಅಂಕೋಲಾ ನಗರಕ್ಕೆ ಪ್ರಯಾಣಿಸುವರು. ನಗರದ ನಾಡವರು ಸಭಾ ಭವನದಲ್ಲಿ ಬೆಳಗ್ಗೆ 11 ಗಂಟೆಗೆ ಲೋಕಸಭಾ ಚುನಾವಣೆ ಕುರಿತು ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಳ್ಳುವರು. ನಂತರ ಮಧ್ಯಾಹ್ನ 2.30 ಗಂಟೆಗೆ ಅಲ್ಲಿಂದ ರಸ್ತೆ ಮಾರ್ಗವಾಗಿ ಗದಗ ಆಗಮಿಸುವರು. ಸಂಜೆ 7 ಗಂಟೆಗೆ ಗದಗ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನವೆಂಬರ 3 ನೇ ತಾರೀಕಿನ ಕಾರ್ಯಕ್ರಮದ ಕುರಿತು ಸಾಹಿತಿಗಳು ಹಾಗೂ ಕನ್ನಡಪರ ಸಂಘಟನೆಗಳ ಜೊತೆ ಸಭೆ ಜರುಗಿಸಿ ಗದಗನಲ್ಲಿ ವಾಸ್ತವ್ಯ ಮಾಡುವರು ಎಂದು ಸಚಿವರ ಕಾರ್ಯಾಲಯದ ಮೂಲಗಳು ತಿಳಿಸಿವೆ.

## ಸಾರ್ವಜನಿಕರ ಗಮನಕ್ಕೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಸಿಂಗಟಾಲೂರ ಬ್ಯಾರೇಜಿಗೆ ಅಕ್ಟೋಬರ್ 24 ರಿಂದ 28 ರ ವರೆಗೆ ತುಂಗಭದ್ರಾ ನದಿಗೆ ಒಳ ಹರಿವು ಇಲ್ಲದೇ ಇರುವ ಕಾರಣ ಹಾಗೂ ಸಿಂಗಟಾಲೂರು ಬ್ಯಾರೇಜಿನಲ್ಲಿ ಕುಡಿಯುವ ನೀರಿನ ಶೇಖರಣೆ ಮಾಡಬೇಕಗಿರುವುದರಿಂದ ಸಿಂಗಟಾಲೂರ ಬ್ಯಾರೇಜಿನ ಬಲ ಭಾಗದ ಮತ್ತು ಎಡ ಭಾಗದ ಲಿಫ್ಟ್‌ಗಳನ್ನು ಸ್ಥಗಿತಗೊಳಿಸುವುದು ಅವಶ್ಯಕವಾಗಿದೆ.

ಅಕ್ಟೋಬರ್ 29 ರಿಂದ ಲಿಫ್ಟ್‌ಗಳನ್ನು ಸ್ಥಗಿತಗೊಳಿಸಲಾಗುವುದು. ರೈತರು ಮತ್ತು ಸಾರ್ವಜನಿಕರು ಸಹಕಾರ ನೀಡಬೇಕೆಂದು ಸಿಂಗಟಾಲೂರ ಏತ ನೀರಾವರಿ ಯೋಜನೆಯ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ರಾಜ್ಯೋತ್ಸವ ಸಂಭ್ರಮದಲ್ಲಿ ಪಾಲ್ಗೊಳ್ಳಿ: ವೈಶಾಲಿ ಎಂ.ಎಲ್




**■ ವಿಜಯಸಾಕ್ಷಿ ಸುದ್ದಿ, ಗದಗ**

50ನೇ ವರ್ಷದ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಸರ್ವ ವಾಣಿಜ್ಯೋದ್ಯಮಿಗಳು ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಕೋರಿದರು.

ಅವರು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಶನಿವಾರ ಗದಗ-ಬೆಟಗೇರಿ ಅವಳಿ ನಗರದ ಸಂಘ-ಸಂಸ್ಥೆಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕರ್ನಾಟಕ ಎಂದು ನಮ್ಮ ರಾಜ್ಯಕ್ಕೆ ಹೆಸರು ನಾಮಕರಣ ಮಾಡಲು ಗದಗ ಜಿಲ್ಲೆ ಮುಖ್ಯ ಪಾತ್ರವನ್ನು ವಹಿಸಿದೆ. 50 ವರ್ಷಗಳ ಹಿಂದೆ ನಡೆದ ಸಂಭ್ರಮವನ್ನು ಮತ್ತೆ ಮೆಲುಕು ಹಾಕುವ ಮೂಲಕ ಸಂಭ್ರಮವನ್ನು ಆಚರಿಸುವ ಸೌಭಾಗ್ಯ ಮತ್ತೆ ಗದಗ ಜನತೆಗೆ ದೊರಕಿರುವುದು ಹೆಮ್ಮೆಯ ಸಂಗತಿಯಾಗಿದೆ. ಮೂರು ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ವ ಂ ತ ಂ ು ▶▶ 3ನೇ ಪುಟಕ್ಕೆ

## ಇಂದು 1ನೇ ಜಿಲ್ಲಾ ಮಟ್ಟದ ರೂಲರ್ ಸ್ಕೇಟಿಂಗ್ ಆಯ್ಕೆ ಪ್ರಕ್ರಿಯೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದಲ್ಲಿ ಒಂದನೇ ಗದಗ ಜಿಲ್ಲಾ ಮಟ್ಟದ ರೂಲರ್ ಸ್ಕೇಟಿಂಗ್ ಆಯ್ಕೆ ಪ್ರಕ್ರಿಯೆ ಅ.29ರಂದು ನಡೆಯಲಿದ್ದು, ಗದಗ ಜಿಲ್ಲೆಯಲ್ಲಿಯೇ ಪ್ರಪ್ರಥಮವಾಗಿ ಇಂತಹ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಗದಗ ಜಿಲ್ಲಾ ಸ್ಕೇಟಿಂಗ್ ತರಬೇತುದಾರ ಮಂಜುನಾಥ ಕುರಿ ಮಾಹಿತಿ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲಯನ್ಸ್ ಸ್ಕೂಲ್ ಹತ್ತಿರ ರಿಂಗ್‌ರೋಡ್‌ನಿಂದ ಬೆಳಗ್ಗೆ 7: 30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಾಗೂ ಕೆ ಎಚ್ ಪಾಟೀಲ್ ▶▶ 3ನೇ ಪುಟಕ್ಕೆ

### ಕರ್ನಾಟಕ ಸಂಭ್ರಮ-50- ಕನ್ನಡ ರಾಜ್ಯೋತ್ಸವ ವಿಶೇಷ ಆಚರಣೆಗೆ ಡಿಸಿ ಮನವಿ

## ಹಣತೆ ಹಚ್ಚಿ ಕನ್ನಡ ಜ್ಯೋತಿ ಬೆಳಗಿಸಿ



**■ ವಿಜಯಸಾಕ್ಷಿ ಸುದ್ದಿ, ಗದಗ**


ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷಗಳು ಪೂರ್ಣಗೊಂಡಿರುವ ಹಿನ್ನಲೆಯಲ್ಲಿ ಈ ವರ್ಷದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ವಿಶೇಷ ರೀತಿಯಾಗಿ ಆಚರಿಸಲು ಉದ್ದೇಶಿಸಲಾಗಿದೆ. ನವೆಂಬರ್ 1 ರಂದು ಜಿಲ್ಲೆಯ ಎಲ್ಲ ಮನೆಗಳ ಮುಂದೆ ಕೆಂಪು ಮತ್ತು ಹಳದಿ ಬಣ್ಣದ ರಂಗೋಲಿಯನ್ನು ಬಿಡಿಸಿ ಕರ್ನಾಟಕ ಸಂಭ್ರಮ-50 "ಹೆಸರಾಯಿತು ಕರ್ನಾಟಕ, ಉಸಿರಾಯಿತು ಕನ್ನಡ" ಎಂಬ ಘೋಷ ವಾಕ್ಯವನ್ನು ಬರೆಯಬೇಕು.

ನವೆಂಬರ್ 1 ರ ಬೆಳಗ್ಗೆ 9 ಗಂಟೆಗೆ ಎಲ್ಲಾ ಆಕಾಶವಾಣಿ ಕೇಂದ್ರಗಳಲ್ಲಿ (ರೇಡಿಯೋ) ನಾಡಗೀತೆಯನ್ನು ಪ್ರಸಾರ ಮಾಡಲಾಗುವುದು. ಈ ಸಂದರ್ಭದಲ್ಲಿ ಕನ್ನಡ ನಾಡಿನ ಸಮಸ್ತ ನಾಗರಿಕರು ಎದ್ದು ನಿಂತು ರಾಷ್ಟ್ರಗೀತೆಗೆ ಗೌರವ ಸಲ್ಲಿಸುವ ರೀತಿಯಲ್ಲಿ ನಾಡ ಗೀತೆಗೂ ಗೌರವ ಸಲ್ಲಿಸಬೇಕು.

ಸಂಜೆ 5 ಗಂಟೆಗೆ ಜಿಲ್ಲೆಯ ಎಲ್ಲ ಗ್ರಾಮಗಳ ಮೈದಾನದಲ್ಲಿ ಕೆಂಪು ಹಳದಿ ಬಣ್ಣದ ಗಾಳಿಪಟಗಳನ್ನು ಆಕಾಶಕ್ಕೆ ಹಾರಿ ಬಿಡುವ ಮೂಲಕ ಸುವರ್ಣ ಸಂಭ್ರಮ ಗಾಳಿಪಟ ಉತ್ಸವ ಆಚರಿಸಬೇಕು. ಸಾಯಂಕಾಲ 7 ಗಂಟೆಗೆ ಜಿಲ್ಲೆಯ ಎಲ್ಲ ಗ್ರಾಮಗಳ ಮನೆಗಳ ಮುಂದೆ, ಕಚೇರಿಗಳ ಮುಂದೆ ಹಾಗೂ ಅಂಗಡಿ-ಮಳಿಗೆಗಳ ಮುಂದೆ ಹಣತೆ(ದೀಪ) ಹೆಚ್ಚುವ ಮೂಲಕ ಕನ್ನಡ ಜ್ಯೋತಿ ಬೆಳಗಿಸಲು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಜಿಲ್ಲೆಯ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

## ಸಿದ್ಧಲಿಂಗ ಶ್ರೀ, ಉತ್ತಂಗಿ ಚನ್ನಪ್ಪನವರ ಕುರಿತು ಉಪನ್ಯಾಸ ಇಂದು





**■ ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಭಾನುವಾರ ನಡೆಯಲಿರುವ ಬಸವದಳದ 1565ನೇ ಶರಣ ಸಂಗಮದಲ್ಲಿ ಕನ್ನಡದ ಜಗದ್ಗುರು ತೋಂಟದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳ 5ನೇ ಸ್ಮರಣೆ ಹಾಗೂ ಸರ್ವಜ್ಞ ಸಾಹಿತಿ ರೇ. ಉತ್ತಂಗಿ ಚನ್ನಪ್ಪನವರ 142ನೇ ಜಯಂತಿ ನಿಮಿತ್ತ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ ಶರಣ ವಿ.ಕೆ ಕರೇಗೌಡ್ರ ವಹಿಸುವರು. ಶರಣೆ ಮಂಜುಳಾ ಹಾಸಿಲಕರ ಮತ್ತು ಶರಣ ಎಂ.ಬಿ ಲಿಂಗದಾಳ ಇವರು ಉಪನ್ಯಾಸ ಮಾಡುವರು.ಕಾರಣ, ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಿಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## ವಿಡಿಎಸ್ ಕ್ಲಾಸಿಕ್ ಪ್ರಾಥಮಿಕ ಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ವಿದ್ಯಾದಾನ ಸಮಿತಿ ಕ್ಲಾಸಿಕ್ ಪ್ರಾಥಮಿಕ ಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಮಸ್ತ ಶಿಕ್ಷಕರು ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಹೂ ಮಾಲೆ ಅರ್ಪಿಸಿ, ಪೂಜೆ ಸಲ್ಲಿಸಿದರು.

ಮುಖ್ಯೋಪಾಧ್ಯಾಯ ಎಂ.ಆರ್ ಡೊಳ್ಳಿನ ಮಾತನಾಡಿ, ವಾಲ್ಮೀಕಿ ಅವರು ಸಂಸ್ಕೃತದ ಆದಿ ಕವಿ, ರಾಮಾಯಣದ ಕರ್ತೃ, ಅಷ್ಟೇ ಅಲ್ಲ ಓರ್ವ ರಾಜನೀತಿ ತಜ್ಞ, ಶಿಕ್ಷಣ ತಜ್ಞ, ಇತಿಹಾಸಕಾರ, ತತ್ವಜ್ಞಾನಿ, ಮಹಾನ್ ತಪಸ್ವಿ, ಸಮಾಜ ಸುಧಾರಕ, ದಾರ್ಶನಿಕ ಹಾಗೂ ಮಹಾತ್ಮರಾಗಿದ್ದಾರೆ. ವಾಲ್ಮೀಕಿ ನಾರದ ಮುನಿಗಳ ಆಶೀರ್ವಾದದಿಂದ ಹಿಂದೂ ಧರ್ಮದ ಮಹಾಕಾವ್ಯವಾದ ರಾಮಾಯಣವನ್ನು ಸಂಸ್ಕೃತದಲ್ಲಿ ಬರೆದು ಆದಿಕವಿ ಎಂದು ಹೆಸರಾದವರು. ಅವರ ಆದರ್ಶ ಗುಣಗಳನ್ನು ಮತ್ತು ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶಿಕ್ಷಕಿ ಗಾಯತ್ರಿ ಅಸುಂಡಿ ಮಹರ್ಷಿ ವಾಲ್ಮೀಕಿ ಅವರ ಜೀವನ, ವೃತ್ತಿ ಹಾಗೂ ಅವರು ಬರೆದ ಶ್ಲೋಕಗಳ ಮತ್ತು ಸಂಕ್ಷಿಪ್ತವಾಗಿ ರಾಮಾಯಣದ ಕುರಿತು ತಮ್ಮ ಅನಿಸಿಕೆಗಳಲ್ಲಿ ಮಾಹಿತಿ ನೀಡಿದರು. ತೇಜಶ್ರೀ ಹಾದಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ರೇಣುಕಾ ವೆಂಕಟಾಪುರ ಸ್ವಾಗತಿಸಿದರು. ಗಾಯತ್ರಿ ಅಸುಂಡಿ ನಿರೂಪಿಸಿದರು. ಅರ್ಚನಾ ಗಿರಿತಿಮ್ಮಣ್ಣವರ ವಂದಿಸಿದರು.

### ಪತ್ರೆವನದಲ್ಲಿ ದಾಸೋಹ ಭವನವನ್ನು ಉದ್ಘಾಟಿಸಿದ ಅಭಿನವ ಮೃತ್ಯುಂಜಯ ಶ್ರೀಗಳು

# ಭಗವಂತನಲ್ಲಿ ಶ್ರದ್ಧೆಯಿಟ್ಟಾಗ ಮುಕ್ತಿ ಪ್ರಾಪ್ತವಾಗುತ್ತದೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಯಾರು ಸಮಾಜದ ಅಭಿವೃದ್ಧಿಯ ಹೊರೆಯನ್ನು ಹೊತ್ತಿರುತ್ತಾರೋ ಅವರಿಗೆ ತುಲಾಭಾರಗಳು ಸಲ್ಲಿಕೆಯಾಗುತ್ತವೆ. ತುಲಾಭಾರಗಳು ಭಕ್ತರ ಭಕ್ತಿಯ ಸಾಕ್ಷಿಗಳಾಗಿವೆ. ಇಲ್ಲಿ ಅಭಿನವ ಚನ್ನಬಸವ ಮಹಾಸ್ವಾಮಿಗಳವರಿಗೆ 15 ತುಲಾಭಾರಗಳು ಸಲ್ಲಿಕೆಯಾಗುತ್ತಿರುವುದು ಅವರ ಮೇಲೆ ಭಕ್ತರ ಪ್ರೀತಿ ಎಷ್ಟಿದೆ ಎಂಬುದನ್ನು ತೋರಿಸುತ್ತದೆ ಎಂದು ಮಣಕವಾಡದ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು ಹೇಳಿದರು.

ನಿಡಗುಂದಿ ಗ್ರಾಮದಲ್ಲಿ ನಿಡಗುಂದಿಕೊಪ್ಪದ ಶ್ರೀ ಚನ್ನಬಸವ ಮಹಾಸ್ವಾಮಿಗಳವರು ನಿರ್ಮಿಸಿದ ಪತ್ರೆವನದಲ್ಲಿ ದಾಸೋಹ ಭವನವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ದೇವರಿಗಾಗಿ ನೀವು ವಾರದಲ್ಲಿ ಒಂದು ದಿನ ಉಪವಾಸ ಮಾಡುವಂತೆ ಒಂದು ದಿನ



ಮೊಬೈಲ್ ಉಪವಾಸವನ್ನೂ ಮಾಡಿ. ಇದರಿಂದ ನಿಮಗೆ, ನಿಮ್ಮ ಮಕ್ಕಳಿಗೆ ಒಳ್ಳೆಯದಾಗುತ್ತದೆ. ಗುರುವಿನ ಮೇಲೆ ಎಂದಿಗೂ ಸಂಶಯಪಡಬಾರದು. ಭಗವಂತನಲ್ಲಿ ಶ್ರದ್ಧೆ ಮತ್ತು ನಂಬಿಕೆಯನ್ನು ಇರಿಸಿದಾಗ ಮಾತ್ರ ನಿಮಗೆ ಮುಕ್ತಿ ಸಿಗುತ್ತದೆ.

ನೀವು ಇಂತಹ ಪವಿತ್ರ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರಿಂದ ನಿಮ್ಮ ಜೀವನ ಸಾರ್ಥಕತೆಯನ್ನು ಪಡೆಯುತ್ತದೆ. ಇಲ್ಲಿನ ಭಕ್ತರ ಉತ್ಸಾಹವನ್ನು ಕಂಡು ನಮಗೆ ಅತೀವ ಸಂತೋಷವಾಗಿದೆ ಎಂದು ಶ್ರೀಗಳು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಹಾವೇರಿ ಹುಕ್ಕೇರಿ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಇಷ್ಟು ದೀರ್ಘ ವರ್ಷಗಳ ಆಯುಷ್ಯವನ್ನು ಪಡೆದಿರುವ ಇವರೇ ನಿಜಕ್ಕೂ ಭಾಗ್ಯಶಾಲಿಗಳು. ಅವರಿಗಿಂತಲೂ ನಾವು ಹೆಚ್ಚಿನ ಭಾಗ್ಯಶಾಲಿಗಳು.

ಏಕೆಂದರೆ, ಶತಮಾನವನ್ನು ದಾಟಿ ಇನ್ನೂ ನಮ್ಮ ನಡುವೆ ಬದುಕುತ್ತಿರುವವರನ್ನು ನಾವು ಕಣ್ಣಾರೆ ಕಂಡಿದ್ದೇವೆ.

ನಿಡಗುಂದಿಕೊಪ್ಪದ ಶ್ರೀ ಚನ್ನಬಸವ ಮಹಾಸ್ವಾಮಿಗಳು ಇಂತಹ ಅಪರೂಪದ ಕಾರ್ಯಕ್ರಮವನ್ನು ಏರ್ಪಡಿಸಿ ನಮಗೆಲ್ಲ ಈ ಹಿರಿಯರ ದರುಶನದ ಭಾಗ್ಯವನ್ನು ಒದಗಿಸಿದ್ದಾರೆ ಎಂದರು.

ವೇದಿಕೆಯ ಮೇಲೆ ವೇದಿಕೆಯ ಮೇಲೆ ನಿಡಗುಂದಿಕೊಪ್ಪದ ಶ್ರೀ ಅಭಿನವ ಚನ್ನಬಸವ ಮಹಾಸ್ವಾಮಿಗಳವರು, ಅಂಕಲಗಿಯ ಅಡವಿ ಸಿದ್ದರಾಮ ಮಹಾಸ್ವಾಮಿಗಳವರು, ಯಲಬುರ್ಗಾದ ಶಿದ್ದರಾಮ ಶಿವಾಚಾರ್ಯರು, ಹೊಸಪೇಟೆಯ ಚಂದ್ರಶೇಖರ ದೇವರು, ನಿಡಗುಂದಿ ಭೀಮಾಂಬಿಕಾ ಮಠದ ಷಣ್ಮುಖಪ್ಪಜ್ಜನವರು ಇನ್ನೂ ಮುಂತಾದ ಹರ-ಗುರು-ಚರ ಮೂರ್ತಿಗಳು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಭೂದಾನಿ ಶಾಂತವ್ವ ವೀರಪ್ಪ ಅಣಗೌಡ್ರ, ರೋಣ ಪುರಸಭೆಯ ಉಪಾಧ್ಯಕ್ಷ ಮಿಥುನ ಪಾಟೀಲ, ನಿವೃತ್ತ ಶಿಕ್ಷಕ ಎಂ.ಎ ಹಿರೆವಡೇಯರ, ಡಾ. ಆರ್.ಕೆ ಗಚ್ಚಿನಮಠ, ಸರ್ವಿ, ಅಂದಪ್ಪ ಬಿಚ್ಚೂರ, ಜಗದೀಶ ಕರಡಿ, ಮಲ್ಲಪ್ಪ ಬಿಚ್ಚೂರ ಇನ್ನೂ ಮುಂತಾದ ಗಣ್ಯರಿದ್ದರು.

### ಶತಾಯುಷಿಗಳಿಗೆ ಸನ್ಮಾನ

ಇದೇ ಸಂದರ್ಭದಲ್ಲಿ ಸ್ಥಳೀಯ ಶತಾಯುಷಿಗಳ ಸನ್ಮಾನ ಸಮಾರಂಭ ನಡೆಯಿತು. ಇದರಿಂದ ಶತಾಯುಷಿಗಳನ್ನು ಕಣ್ಣಾರೆ ಕಾಣುವ ಭಾಗ್ಯ ಸಮಾರಂಭದಲ್ಲಿ ನೆರೆದ ಭಕ್ತರಿಗೆ ದೊರಕಿತು. ಈ ಸಮಾರಂಭದಲ್ಲಿ ಮಾರನಬಸರಿ ಗ್ರಾಮದ 117 ವರ್ಷದ ಶಂಕ್ರಮ್ಮ ಮುದುಕಪ್ಪ ಮಾಟರಂಗಿ, ಅದೇ ಗ್ರಾಮದ 103 ವರ್ಷದ ಲಕ್ಷ್ಮವ್ವ ಹನಮಂತಪ್ಪ ಚಂಗಳಿ, ಲಕ್ಕಲಕಟ್ಟಿ ಗ್ರಾಮದ 105 ವರ್ಷದ ನೀಲಮ್ಮ ನಾಗಪ್ಪ ಮ್ಯಾಗೇರಿ, ಕೊನಸಾಗರದ 102 ವರ್ಷದ ಶರಣಮ್ಮ ವೀರಭದ್ರಪ್ಪ ಅರಳಿ, ಬಸಮ್ಮ ತೋಟಪ್ಪ ವಜ್ರಬಂಡಿ ಅವರನ್ನು ವೇದಿಕೆಯ ಮೇಲಿದ್ದ ಹರ-ಗುರು-ಚರ ಮೂರ್ತಿಗಳು ಮತ್ತು ಅತಿಥಿಗಳು ಸನ್ಮಾನಿಸಿದರೆ, ನೆರೆದ ಭಕ್ತ ಸಮೂಹ ಕುಳಿತಲ್ಲಿಯೇ ಅವರಿಗೆ ಕೈ ಮುಗಿದರು.

## ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆ: 10 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ಪಿಡಿಓ ಬಂಧನ



■ವಿಜಯಸಾಕ್ಷಿ ಸುದ್ದಿ, ದಾವಣಗೆರೆ

ಇ-ಸ್ವತ್ತು ಮಾಡಿಕೊಡಲು ಲಂಚದ ಬೇಡಿಕೆ ಇಟ್ಟಿದ್ದ ಪಿಡಿಒ ಹಾಗೂ ಡಾಟಾ ಎಂಟ್ರಿ ಆಪರೇಟರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಈ ಘಟನೆ ನಡೆದಿದೆ. ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿಯ ಪಿಡಿಒ ನಂದಿ ಅಂಗೇಶ ಸಾರಂಗಮಠ ಹಾಗೂ ಡಾಟಾ ಎಂಟ್ರಿ ಆಪರೇಟರ್ ಅಜ್ಜಯ್ಯ ಆರ್. ಎಂಬಿಬ್ಬರು ಭ್ರಷ್ಟ ಬಂಧಿತ ಸಿಬ್ಬಂದಿಗಳಾಗಿದ್ದಾರೆ.

ಬಸವನಗೌಡ ಎಂಬವರು ಜಿಲ್ಲೆಯ ಜಗಳೂರು ತಾಲೂಕಿನ ಕೆಳಗೋಟೆ ಗ್ರಾಮದಲ್ಲಿರುವ ಮನೆ ಖಾತೆ ನಂ. 23ಕ್ಕೆ ಇ-ಸ್ವತ್ತು ಮಾಡಿಕೊಡಲು ತಾಲೂಕಿನ ಕೆಚ್ಚೇನಹಳ್ಳಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದರು.

ಇ-ಸ್ವತ್ತು ಮಾಡಿಕೊಡಲು ಪಿಡಿಒ 10,000 ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಅರ್ಜಿದಾರರು ಅ. 21ರಂದು ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಪಡೆದ ಲೋಕಾಯುಕ್ತ ಅಧಿಕಾರಿಗಳು ಇಂದು ಬಸವನಗೌಡ ಅವರಿಂದ ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಲಂಚ ಪಡೆಯುವಾಗ ಟ್ರ್ಯಾಪ್ ಮಾಡಿದ್ದಾರೆ. ಲೋಕಾಯುಕ್ತ ಎಸ್ಪಿ ಎಂಎಸ್ ಕೌಲಪುರೆ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.



ಬೆಟಗೇರಿ ನಗರದ ಮಹಾರಾಣಾ ಪ್ರತಾಪಸಿಂಹ ಶಿಕ್ಷಣ ಸಂಸ್ಥೆಯಲ್ಲಿ ಶನಿವಾರ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಶಿಕ್ಷಣ ಸಂಸ್ಥಾಪಕರಾದ ಗಣೇಶಸಿಂಗ ಬ್ಯಾಳಿಯವರು ಮಹರ್ಷಿ ವಾಲ್ಮೀಕಿಯವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ಎ.ಎ ಹದ್ಲಿ, ಮುಖ್ಯೋಪಾಧ್ಯಾಯ ಎಸ್. ಎಸ್ ಬಡಿಗೇರ ಹಾಗೂ ಸಮಸ್ತ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಪ್ರದ ಕಾಲೇಜಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಪ್ರೊ.ತಿಮ್ಮಾರಡ್ಡಿ ಮೇಟಿ ಮಾತನಾಡಿ, ರಾಮಾಯಣದ ಆದರ್ಶ ತತ್ವಗಳು ಇಂದಿಗೂ ಪಾಲನೆಯಾಗುತ್ತಿವೆ.

ಅಂಥ ಮಹಾಕಾವ್ಯವನ್ನು ರಚಿಸಿದ ವಾಲ್ಮೀಕಿ ಮಹರ್ಷಿಗಳು ಮೇರುಪಂಕ್ತಿಯಲ್ಲಿರುವ ಶ್ರೇಷ್ಠರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥರಾದ ಡಾ.ಭಾಗ್ಯಜ್ಯೋತಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಗಾಯತ್ರಿ ಭಾವಿಕಟ್ಟಿ, ಉಪನ್ಯಾಸಕರಾದ ಡಾ.ಪ್ರಕಾಶ ಬಳ್ಳಾರಿ, ಶಿವಣ್ಣ, ಗೋಣಿಬಸಪ್ಪ, ವಿಜಯಕುಮಾರ್ ಕುಲಕರ್ಣಿ, ಬಸವರಾಜ ಕರುಗಲ್, ಪ್ರಕಾಶ ಜಡಿಯವರ್, ವಿಜಯಕುಮಾರ್. ಕೆ., ಜ್ಞಾನೇಶ್ವರ ಪತ್ತಾರ, ಡಾ.ತುಕಾರಾಂ ನಾಯಕ, ಬಸವರಾಜ.ಸಿ, ಮಹಾಂತೇಶ್ ನೆಲಗುಣಿ, ನವೀನ್, ಮಾರುತಿ, ವೀಣಾ ಪೂಜಾರತಿ, ಸಿದ್ಧಲಿಂಗೇಶ, ಡಾ.ವೀರಣ್ಣ ಸಜ್ಜನರ್, ಶಿವಬಸಪ್ಪ ಮಸ್ಕಿ, ಡಾ.ಸಣ್ಣದೇವೇಂದ್ರಸ್ವಾಮಿ ಬೋಧಕೇತರ ಸಿಬ್ಬಂದಿ ಜಯಪ್ರಕಾಶ್ ಬಿರಾದಾರ್, ನಿಂಗಪ್ಪ.ಕೆ., ರವಿಕಿರಣ್ ರಾಠೋಡ, ರಮೇಶ್, ಅಶೋಕ, ವೆಂಕಟೇಶ್ ಮತ್ತಿತರರು ಇದ್ದರು.

## ಪಂಡಿತ್ ಪುಟ್ಟರಾಜರ ಪುಣ್ಯಸ್ಮರಣೆ: ನೋಟ್‌ಬುಕ್ ವಿತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಗುರು ಪಂಡಿತ್ ಪುಟ್ಟರಾಜರ 13ನೇ ಪುಣ್ಯಸ್ಮರಣೆಯ ಅಂಗವಾಗಿ ಶ್ರೀ ಕಾಶಿ ಪೀಠದ ಸಂಸ್ಕೃತ ಪಾಠಶಾಲೆಯ ಮಕ್ಕಳಿಗೆ ಪೆನ್ನು ಹಾಗು ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ಗುರು ಪಂಡಿತ್ ಪುಟ್ಟರಾಜ ಸಮಾಜದ ಟ್ರಸ್ಟಿನ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಹಾಗೂ ಓಣಿಯ ಹಿರಿಯರಾದ ಪಟ್ಟದಕಲ್, ಬಸವರಾಜ್ ಚಿನ್ನಾಪುರ, ಬಸನಗೌಡ ಹಿರೇಗೌಡ, ಶಿವಪ್ಪ ಲಗಳಿ



ಹಾಗೂ ಕಮಿಟಿಯ ಅಧ್ಯಕ್ಷರಾದ ಎಸ್. ಜಿ. ಕಟ್ಟಿಗೆಹಳ್ಳಿಮಠ ಉಪಾಧ್ಯಕ್ಷರಾದ ಬಸನಗೌಡ ಪಾಟೀಲ್, ಕಾರ್ಯದರ್ಶಿಗಳಾದ ಗಂಗಾಧರ ಬೆಣಕಲ್, ಖಜಾಂಚಿ ಮಾಂತೇಶ್ ಲಗಳಿ, ಸದಸ್ಯರಾದ ಈಶಪ್ಪ ಅಂಗಡಿ, ಬಸವರಾಜ ದಾವಣಗೆರೆ, ಶರಣಪ್ಪ ಮೇಟಿ ಹಾಗೂ ಭೀಮಪ್ಪ ಮೊಕಾಶಿ ಇದ್ದರು.

## ನನ್ನ ಬಳಿ ಇರೋ ಮಾಹಿತಿ ಸಿಎಂ, ಡಿಸಿಎಂಗೆ ಹೇಳುತ್ತೇನೆ: ಶಾಸಕ ಗಣಿಗ ರವಿ

■ವಿಜಯಸಾಕ್ಷಿ ಸುದ್ದಿ, ಮಂಡ್ಯ

ಸರ್ಕಾರ ಕೆಡವಲು ನಮ್ಮ ಶಾಸಕರ ಬಳಿ ಮಾತನಾಡಿ 50 ಕೋಟಿ ಆಫರ್ ನೀಡಿ ಬಿಜೆಪಿಗೆ ಬಂದರೆ ಮಂತ್ರಿಗಿರಿ ಕೊಡ್ತೀವಿ ಎಂದು ಹೇಳಿದ್ದಾರೆ.

ಹಳೆ ಮೈಸೂರು ಭಾಗದ ಒಬ್ಬ ಎಂಎಲ್‌ಸಿ, ಬೆಳಗಾವಿಯ ಮಾಜಿ ಸಚಿವ ಹಾಗೂ ಸಂತೋಷ್, ಗೋಲ್ಡ್ ಫಿಂಚ್‌ನಲ್ಲಿ ನಮ್ಮ ಶಾಸಕರನ್ನು ಮೀಟ್ ಮಾಡಿದ್ದಾರೆ.

ಎರಡು ದಿನದ ಬಳಿಕ ನಾನು ಸಿಎಂ, ಡಿಸಿಎಂ ಜೊತೆ ಮಾತನಾಡಿ ಮಾಧ್ಯಮದ ಮುಂದೆ ಬರುತ್ತೇನೆ ಎಂದು ಮಂಡ್ಯದಲ್ಲಿ ಶಾಸಕ



ಗಣಿಗ ರವಿ ಹೇಳಿದ್ದಾರೆ.

ಶುಕ್ರವಾರ ಹೇಳಿದ್ದನ್ನು ಮತ್ತೆ ರಿಪೀಟ್ ಮಾಡಲು ನಂಗೆ ಇಷ್ಟ ಇಲ್ಲ. ಶಾಸಕರನ್ನು ಸೆಳೆಯಲು ಪ್ರಯತ್ನ ಪಡುತ್ತಿರೋದಕ್ಕೆ ಸಾಕ್ಷಿ ಇದೆ. ಮೂರು ಅಲ್ಲ ಇನ್ನೂ ದೊಡ್ಡ ದೊಡ್ಡ ನಾಯಕರು ಇದ್ದಾರೆ ಅಂತಾ ನಮ್ಮ ಡಿಸಿಎಂ ಹೇಳಿದ್ದಾರೆ. ನನ್ನ ಬಳಿ ಇರೋ ಮಾಹಿತಿಯನ್ನು ಸಿಎಂ, ಡಿಸಿಎಂಗೆ ಹೇಳುತ್ತೇನೆ. ಅವರ ಬಳಿ ಇರುವ ಮಾಹಿತಿ ತೆಗೆದುಕೊಂಡು ಮಾಧ್ಯಮದ ಮುಂದೆ ಬರುತ್ತೇನೆ.

ಒಂದು ವೇಳೆ ನನಗೆ ಆಫರ್ ನೀಡಲು ಬಂದಿದ್ದರೆ ಲೈವ್ ಮಾಡಿ ತೋರಿಸುತ್ತಾ ಇದ್ದೆ.

ಸಂತೋಷ್ ಪಕ್ಷಕ್ಕೆ ಕರೆದಿರೋದು ಬೇರೆ ವಿಚಾರ ಅಂತಾ ಈಗಾಗಲೇ ಹೇಳಿದ್ದಾರೆ. ಪಕ್ಷಕ್ಕೆ ಕರೆದಿರೋದು ನಿಜ ಎಂದು ಅವರೇ ಒಪ್ಪಿಕೊಂಡಿದ್ದಾರೆ ಎಂದರು.

## ಬಿಜೆಪಿ ಟಿಕೆಟ್ ಕೊಡಿಸುವುದಾಗಿ ವಂಚನೆ: ರೇವಣ ಸಿದ್ದಪ್ಪ ಅರೆಸ್ಟ್

■ವಿಜಯಸಾಕ್ಷಿ ಸುದ್ದಿ, ಬಳ್ಳಾರಿ

ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಿವೃತ್ತ ಎಂಜಿನಿಯರ್ ಒಬ್ಬರಿಗೆ ಕೋಟಿ ಕೋಟಿ ಹಣ ವಂಚಿಸಿದ ಆರೋಪದ ಮೇಲೆ ಬಿಜೆಪಿಯ ಮಾಜಿ ಮುಖಂಡ ಹಾಗೂ ಹಾಲಿ ಕೆಆರ್‌ಪಿಪಿ ಪಕ್ಷದ ನಾಯಕ ರೇವಣ ಸಿದ್ದಪ್ಪನನ್ನು ಕೊಟ್ಟೂರು ಪೊಲೀಸರು ಬಂಧಿಸಿದ್ದಾರೆ.

ಹಗರಿಬೊಮ್ಮನ ಹಳ್ಳಿ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆರೋಪಿ ರೇವಣ ಸಿದ್ದಪ್ಪ, ಪುತ್ತೂರು ಮೂಲದ ಶೇಖರ್ ಜೊತೆ ಸೇರಿ ಕೊಟ್ಟೂರಿನ ನಿವೃತ್ತ ಎಂಜಿನಿಯರ್ ಶಿವಮೂರ್ತಿ ಅವರಿಗೆ 1.95 ಕೋಟಿ ರೂ. ಪಡೆದು ವಂಚಿಸಿದ್ದಾನೆ. ಬೇರೆಯವರಿಗೆ ಟಿಕೆಟ್



ಘೋಷಣೆಯಾದ ಬಳಿಕ ವಿಚಾರ ತಿಳಿದ ಶಿವಮೂರ್ತಿ ಪ್ರಶ್ನಿಸಿದಾಗ ಬೆದರಿಕೆಯನ್ನು ಹಾಕಿದ್ದಾನೆ ಎಂದು ಆರೋಪಿಸಲಾಗಿದೆ.

ಇದಾದ ಬಳಿಕ ಊರಿನ ಮುಖಂಡರು ರಾಜಿ ಕೂಡ ಮಾಡಿಸಿದ್ದರು. ಈ ವೇಳೆ ಆರೋಪಿ ಹಣ ವಾಪಸ್ ನೀಡುವುದಾಗಿ ಎರಡು ಚೆಕ್‌ಗಳನ್ನು ನೀಡಿದ್ದ. ಈ ಚೆಕ್‌ಗಳು ಬೌನ್ಸ್ ಆಗಿದ್ದವು. ಬಳಿಕ ಈ ಬಗ್ಗೆ ಶಿವಮೂರ್ತಿ ಕೊಟ್ಟೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಪ್ರಕರಣ ದಾಖಲಾದ ದಿನದಿಂದ ಪ್ರಕರಣದ ಪ್ರಮುಖ ಆರೋಪಿ ರೇವಣ ಸಿದ್ದಪ್ಪ ತಲೆ ಮರೆಸಿಕೊಂಡಿದ್ದ. ಪ್ರಕರಣವನ್ನೂ ಗಂಭೀರವಾಗಿ ಪರಿಗಣಿಸಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಯ ಬಂಧನವನ್ನು ವಿಜಯನಗರ ಎಸ್‌ಪಿ ಶ್ರೀಹರಿಬಾಬು ಅವರು ಖಚಿತಪಡಿಸಿದ್ದಾರೆ.

## ಭರವಸೆ ಕಳೆದುಕೊಂಡವರಿಗೆ ಘಾನಾ ರಾಜ್ಯದ ಜನ ಮಾದರಿ



■ವಿಜಯಸಾಕ್ಷಿ ಸುದ್ದಿ, ಗದಗ

ಪಶ್ಚಿಮ ಹಾಗೂ ಯುರೋಪ್ ದೇಶಗಳಲ್ಲಿಯೇ ಪೂರ್ವ ಪಶ್ಚಿಮದ ಘಾಣಾ ರಾಜ್ಯದ ಜನರು ಅತ್ಯಂತ ಶ್ರಮಜೀವಿಗಳು. ಬದುಕುವ ಹಾದಿಯನ್ನು ಕಂಡುಕೊಳ್ಳಲು ನಿತ್ಯ ಅವರು ದುಡಿಯಲೇಬೇಕು. ಹೀಗಾಗಿ ಭರವಸೆ ಕಳೆದುಕೊಂಡವರಿಗೆ ಘಾಣಾ ರಾಜ್ಯದ ಜನ ಮಾದರಿಯಾಗಬಲ್ಲರು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಬಸವರಾಜ ಹೊರಟ್ಟಿ ದಂಪತಿಗಳು ದತ್ತು ಪಡೆದ ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದಲ್ಲಿ ಆಯೋಜಿಸಿದ್ದ ಬನ್ನಿ ಮುಡಿಯುವ ಕಾರ್ಯಕ್ರಮ, ವಿವಿಧ ಕಟ್ಟಡಗಳ ಕಾಮಗಾರಿಗಳ ವೀಕ್ಷಣೆ, ಅಭಿನಂದನಾ ಕಾರ್ಯಕ್ರಮ ಹಾಗೂ ಸಂವಾದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಘಾಣಾ ದೇಶದ ಶೇ.80ಕ್ಕೂ ಹೆಚ್ಚು ಜನ ದುಡಿಮೆಯನ್ನೇ ಅವಲಂಬಿಸಿದ್ದಾರೆ. ದುಡಿಯದೇ ಇದ್ದರೆ ಅವತ್ತಿನ ಬದುಕು ದುಸ್ತರ. ಆದರೂ ಅವರು ಅಲ್ಲಿನ ನಿಸರ್ಗ, ಪರಿಸರವನ್ನು ಅವಲಂಬಿಸಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದಾರೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಂತ್ರದಂತೆ ಅತ್ಯಂತ ಖುಷಿಯಾಗಿ ಇರುವ ಜನರನ್ನು ನೋಡಿ, ಬದುಕಲು ಎಷ್ಟೊಂದು ದಾರಿಗಳಿವೆ ಎನಿಸದಿರದದು ಎಂದರು.

ಈ ಸಂದರ್ಭದಲ್ಲಿ ಡಾ.ಬಸವರಾಜ ಧಾರವಾಡ, ಸಾ.ಶಿ. ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್ ಬುರಡಿ, ನಡುವಿನಮನಿ, ನಗರಸಭಾ ಸದಸ್ಯರಾದ ವಿದ್ಯಾವತಿ ಗಡಗಿ, ಎಸ್.ಎಂ ಅಗಡಿ, ಮುಖ್ಯೋಪಾಧ್ಯಾಯರಾದ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ.ಅಣ್ಣಿಗೇರಿ, ಎಸ್.ಆರ್ ಹನಮಗೌಡ್ರ, ಎಸ್.ಜಿ ಕುಲಗುಡಿ, ಎಮ್.ಆಯ್ ಶಿವನಗೌಡ್ರ, ಎಂ.ಪಿ ಸಾಂಬ್ರಾಣಿ, ಎಸ್.ಬಿ ಗುಳೇದವರ, ಎಸ್.ಎಂ ಪತ್ತಾರ, ಎಸ್.ಎಸ್ ಗಾಳಿ, ಆರ್. ವಾಯ್ ಬಸರಿ, ಎಸ್.ಎ ಬಾಣದ, ಎಸ್.ಎ ಗದ್ದನಕೇರಿ, ಎನ್.ಆರ್ ಶಿರೋಳ, ಎಸ್.ಯು ಕುಷ್ಟಗಿ, ಜಿ.ಎನ್ ಅಳವಂಡಿ, ಪಿ.ವ್ಹಿ ದಾಸರ, ಪ್ರ.ದ.ಸ. ಎಲ್.ಎಸ್ ಮಾಳೊತ್ತರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


### ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545


### ಸೋಮೇಶ್ವರ ಪಾದಗಟ್ಟಿಯ ಬನ್ನಿಮಹಾಂಕಾಳಿ ಮಂಟಪದಲ್ಲಿ ವಿಶೇಷ ಪೂಜೆ

# ಪರಂಪರೆಯ ಉಳಿವಿನಲ್ಲಿ ಮಹಿಳೆಯರ ಪಾತ್ರ ಹಿರಿದು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭಾರತೀಯ ಧರ್ಮ ಪರಂಪರೆಯಲ್ಲಿ ಮಹಿಳೆಯರಿಗೆ ಪೂಜ್ಯ ಸ್ಥಾನವಿದೆ. ಮಹಿಳೆಯರು ಗೌರವಿಸಲ್ಪಡುವಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ನಂಬಿಕೆಯಿಂದ ಸಮಾಜದಲ್ಲಿ ಹಬ್ಬ-ಹರಿದಿನ, ಆಚರಣೆ, ಸಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಉಡಿ ತುಂಬಿ ಗೌರವಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಹೇಳಿದರು. ಪಟ್ಟಣದ ಸೋಮೇಶ್ವರ ಪಾದಗಟ್ಟಿಯ ಬನ್ನಿಮಹಾಂಕಾಳಿ ಮಂಟಪದಲ್ಲಿ ಮಹಾನವಮಿ ವಿಶೇಷ ಪೂಜೆ ಮತ್ತು ಉಡಿ ತುಂಬುವ ಕಾರ್ಯಕ್ರಮ ನೆರವೇರಿಸಿ ಆಶೀರ್ವಚನ ನೀಡಿ, ನಮ್ಮ ಧರ್ಮ, ಸಂಸ್ಕೃತಿ, ಪರಂಪರೆಗಳ ಉಳಿವಿನಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದೆ.

ಹಬ್ಬ, ಆಚರಣೆ, ಪೂಜೆ, ಪ್ರಾರ್ಥನೆಯಿಂದ ಪರಸ್ಪರಲ್ಲಿ ಭಾಂದವ್ಯ ವೃದ್ಧಿಯಾಗುತ್ತದೆ. ನ್ಯಾಯ-ನೀತಿ-ಧರ್ಮ, ಪ್ರೀತಿ-ವಿಶ್ವಾಸ ವೃದ್ಧಿಸುತ್ತದೆ. ದೇವಿಯ ಆರಾಧನೆಯಿಂದ ನಮ್ಮಲ್ಲಿರುವ ದುರ್ಗುಣಗಳು ದೂರವಾಗಿ ಸದ್ಗುಣಗಳ ಪ್ರಾಪ್ತಿಯಾಗಲಿದೆ. ರೈತರ ಸಂಕಷ್ಟಗಳು ದೂರವಾಗಿ ಬದುಕು ಬಂಗಾರವಾಗಲು ದೇವಿಯ ಕೃಪಾಶೀರ್ವಾದ ಲಭಿಸಲಿ ಎಂದರು.

ಪುರಸಭೆ ಮಾಜಿ ಅಧ್ಯಕ್ಷೆ ಅಶ್ವಿನಿ ಅಂಕಲಕೋಟಿ, ಸುನೀಲ ಮಹಾಂತಶೆಟ್ಟರ, ಚಂಬಣ್ಣ ಬಾಳಿಕಾಯಿ, ಎಸ್.ಎಫ್ ಆದಿ ಮಾತನಾಡಿದರು. ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತರಾದ ಇಂದುಮತಿ ಜಕ್ಕನಗೌಡ್ರ, ಸಮಾಜ ಸೇವಕರಾದ ನೀಲಪ್ಪ ಕನವಳ್ಳಿ, ಚನ್ನಪ್ಪ ಚಿಂಚಲಿ ಅವರನ್ನು ಸನ್ಮಾನಿಸಲಾಯಿತು. ಹಿರಿಯರಾದ ನೀಲಮ್ಮ ಮೆಣಸಿನಕಾಯಿ, ಭರಮಪ್ಪ ಕೊಡ್ಲಿ, ಸಿದ್ದನಗೌಡ ಬಳ್ಳೊಳ್ಳಿ, ಮುದಕನಗೌಡ ಪಾಟೀಲ, ಸುರೇಶ ರಾಚನಾಯ್ಕರ, ವಿಜಯ ಹತ್ತಿಕಾಳ, ಬಂಗಾರಪ್ಪ ಮುಳಗುಂದ, ವಿರುಪಾಕ್ಷ ಆದಿ, ಬಸವರಾಜ ಮೆಣಸಿನಕಾಯಿ, ಶೇಖಪ್ಪ ಹುರಕಡ್ಲಿ, ಈರಣ್ಣ ಆದಿ, ಜಿ.ಎಸ್ ಗುಡಗೇರಿ, ನಾಗರಾಜ ಕಳಸಾಪುರ ಇದ್ದರು. ಪ್ರೊ.ಸೋಮಶೇಖರ ಕೆರಿಮನಿ, ಈಶ್ವರ ಮೆಡ್ಲೇರಿ, ಸ್ನೇಹಾ ಹೊಟ್ಟಿ ನಿರೂಪಿಸಿದರು.

ಯಲ್ಲಪ್ಪ ಪಲ್ಲೇದ ಮಾತನಾಡಿ, ಶ್ರೀ ಸೋಮೇಶ್ವರ ದೇವಸ್ಥಾನದ ಪಾದಗಟ್ಟಿಯ ಬನ್ನಿಮಹಾಂಕಾಳಿ ಮಂಟಪಕ್ಕೆ ವಿಜಯದಶಮಿ ದಿನ ಪಟ್ಟಣದ ಎಲ್ಲ ದೇವಸ್ಥಾನಗಳ ಉತ್ಸವಮೂರ್ತಿಯ ಪಲ್ಲಕ್ಕಿ ಮೆರವಣಿಗೆ ಸಮೇತ ಆಗಮಿಸಿ ಇಲ್ಲಿ ಬನ್ನಿ ಮುಡಿದ ನಂತರವೇ ಪಟ್ಟಣದಲ್ಲಿ ಬನ್ನಿ ವಿನಿಮಯ ಆರಂಭವಾಗುತ್ತದೆ. ಈ ಪವಿತ್ರ ಸ್ಥಳದ ಅಭಿವೃದ್ಧಿಗಾಗಿ ಪಟ್ಟಣದ ಪುರಸಭೆ ಸಹಕಾರ ನೀಡಬೇಕು ಎಂದರು.

## ಪದ್ಮಾ ಕಬಾಡಿಯವರಿಗೆ 'ರಾಷ್ಟ್ರೀಯ ರತ್ನ' ಪ್ರಶಸ್ತಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ಶ್ರೀಮತಿ ಪದ್ಮಾ ಜೆ.ಕಬಾಡಿ ಇವರ ಸಂಗೀತ, ಸಾಹಿತ್ಯ ಕ್ಷೇತ್ರದಲ್ಲಿನ ಸೇವೆಯನ್ನು ಪರಿಗಣಿಸಿ ಇಂಟರ್‌ನ್ಯಾಷನಲ್ ಹ್ಯೂಮನ್ ಡೆವಲಪ್‌ಮೆಂಟ್ ಕೌನ್ಸಿಲ್ ವತಿಯಿಂದ 'ರಾಷ್ಟ್ರೀಯ ರತ್ನ' ಪ್ರಶಸ್ತಿಯನ್ನು ಘೋಷಿಸಲಾಗಿದೆ.

ಅ.30ರಂದು ಗೋವಾದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಹೇಶ ಪಾಟೀಲ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

## ರಾಮಾಯಣದ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ

▸▸ಮೊದಲನೇ ಪುಟದಿಂದ

ತಮ್ಮ ಮಕ್ಕಳಿಗೆ ಉತ್ತಮವಾದ ಮಾರ್ಗದರ್ಶನ ನೀಡಿ ಪ್ರೇರಣೆ ನೀಡುವಂತೆ ಎಸ್.ವಿ.ಸಂಕನೂರ ಕರೆ ನೀಡಿದರು. ನಿವೃತ್ತ ನ್ಯಾಯಾದೀಶರಾದ ಡಿ.ವಾಯ್.ಬಸಾಪುರ ಮಹರ್ಷಿ ವಾಲ್ಮೀಕಿ ಅವರ ತತ್ವಾದರ್ಶಗಳ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷರಾದ ಉಷಾ ದಾಸರ, ಉಪಾಧ್ಯಕ್ಷರಾದ ಸುನಂದಾ ಬಾಕಳೆ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಮಹರ್ಷಿ ವಾಲ್ಮೀಕಿ ಸಂಘದ ಜಿಲ್ಲಾ ಅಧ್ಯಕ್ಷ ಬಸವರಾಜ ಬೆಳದಡಿ, ತಾಲೂಕು ಅಧ್ಯಕ್ಷ ಆದಪ್ಪನವರ ಸೇರಿದಂತೆ ಸಮುದಾಯದ ಗಣ್ಯರು, ಮುಖಂಡರು, ಸಾರ್ವಜನಿಕರು, ವಿವಿಧ ಇಲಾಖೆ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ ಸ್ವಾಗತಿಸಿದರು. ಬಾಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ಪ್ರಬಂಧ ಸ್ಪರ್ಧೆ ವಿಜೇತ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಗಣ್ಯರು ವಿತರಿಸಿದರು.

## ರಾಜ್ಯೋತ್ಸವ ಸಂಭ್ರಮದಲ್ಲಿ ಪಾಲ್ಗೊಳ್ಳಿ: ವೈಶಾಲಿ ಎಂ.ಎಲ್

▸▸ಮೊದಲನೇ ಪುಟದಿಂದ

ವಿಶೇಷವಾಗಿ ಜರುಗುತ್ತಿರುವ ಮೆರವಣಿಗೆ ಕಾರ್ಯಕ್ರಮದಲ್ಲಿ ವಾಣಿಜ್ಯೋದ್ಯಮಿಗಳು ಭಾಗವಹಿಸುವುದಲ್ಲದೆ, ತಮ್ಮ ಅಂಗಡಿ ಹಾಗೂ ಉದ್ಯಮಕ್ಕೆ ವಿಶೇಷ ದೀಪಾಲಂಕಾರ ಮತ್ತು ಕನ್ನಡ ಬಾವುಟಗಳಿಂದ ಅಲಂಕರಿಸಬೇಕೆಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ 50ನೇ ವರ್ಷದ ಕರ್ನಾಟಕ ರಾಜ್ಯೋತ್ಸವದ ಕುರಿತು ಸವಿಸ್ತಾರವಾಗಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಈಶ್ವರಪ್ಪ ಸಿ.ಮುನವಳ್ಳಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಸ್ಥೆಯ ಮಾಜಿ ಅಧ್ಯಕ್ಷ ಚಂದ್ರು ಬಾಳಿಹಳ್ಳಿಮಠ, ಸಂಸ್ಥೆಯ ಸಹ ಗೌರವ ಕಾರ್ಯದರ್ಶಿ ರಾಜಣ್ಣಾ ಬಿ.ಮಲ್ಲಾಡದ, ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರಕಾಶ ಎಸ್. ಉಗಲಾಟದ ಉಪಸ್ಥಿತರಿದ್ದರು.

ಸಂಸ್ಥೆಯ ಉಪಾಧ್ಯಕ್ಷ ತಾತನಗೌಡ ಎಸ್.ಪಾಟೀಲ ವಂದಿಸಿದರು. ಸಭೆಯಲ್ಲಿ ಸಂಸ್ಥೆಯ ಪದಾಧಿಕಾರಿಗಳು, ಮಾಜಿ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಅವಳಿ ನಗರದ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಮಹಿಳಾ ಘಟಕದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಗದಗ-ಬೆಟಗೇರಿ ನಗರಸಭೆಯ ವಾರ್ಡ್ ನಂ. 26ರ ತೆಗ್ಗಿನಲಾಟ ಮಾರ್ಕೆಟ್‌ನಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಶ್ರೀ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು.

## ಮಹನೀಯರು ಯಾವುದೇ ಜಾತಿ-ಮತಕ್ಕೆ ಸಿಮೀತವಾಗಿಲ್ಲ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ರಾಮಾಯಣದಲ್ಲಿ ಉನ್ನತ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಪಾದಿಸಿರುವ ಮಹರ್ಷಿ ವಾಲ್ಮೀಕಿ ಅವರು ಭಾರತೀಯ ಇತಿಹಾಸಕ್ಕೆ ಅಮೂಲ್ಯ ಕೊಡುಗೆ ನೀಡುವುದರೊಂದಿಗೆ ಮನಃಪರಿವರ್ತನೆ ಮಾಡಿದ್ದಾರೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಶಿರಹಟ್ಟಿಯಲ್ಲಿ ಶನಿವಾರ ತಾಲೂಕಾಡಳಿತದ ವತಿಯಿಂದ ಜರುಗಿದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಗುಣ ಮತ್ತು ಸಾಧನೆಯಿಂದ ವಾಲ್ಮೀಕಿ ಮಹರ್ಷಿ ಮಹಾನ್ ವ್ಯಕ್ತಿಯಾಗಿದ್ದಾರೆ. ಬೇಡ ಕುಲದಲ್ಲಿ ಜನಿಸಿ ಇಡೀ ಜಗತ್ತಿಗೆ ರಾಮಾಯಣದ ಮೂಲಕ ನೀತಿ ಬೋಧನೆಯನ್ನು ಮಾಡಿದ ಮಹಾನ್ ದಾರ್ಶನಿಕರಾಗಿದ್ದಾರೆ. ಇಂತಹ ಮಹನೀಯರು ಯಾವುದೇ ಜಾತಿ-ಮತಕ್ಕೆ ಸಿಮೀತವಾಗಿಲ್ಲ. ಇವರು ಪ್ರತಿಪಾದಿಸಿದ ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸಿದರೆ ರಾಮ ರಾಜ್ಯವಾಗುವುದರಲ್ಲಿ ಸಂದೇಹವಿಲ್ಲ ಎಂದರು. ತಾಲೂಕಾ ಮಹರ್ಷಿ ವಾಲ್ಮೀಕಿ ಸಂಘದ ಅಧ್ಯಕ್ಷ ಶಿವನಗೌಡ ಪಾಟೀಲ ಮಾತನಾಡಿದರು. ಪ್ರಾಸ್ತಾವಿಕವಾಗಿ ಸಮಾಜ ಕಲ್ಯಾಣಾಧಿಕಾರಿ ಶರಣಯ್ಯ ಕುಲಕರ್ಣಿ ಮಾತನಾಡಿದರು. ಉಪನ್ಯಾಸಕ ಮಂಜುನಾಥ ಅಂಬಲಿ ನೀಡಿದರು. ಉಪನ್ಯಾಸ ನೀಡಿದರು. ಎಸ್.ವಿ ಬಟ್ಟೂರ ನಿರೂಪಿಸಿದರು.

ಮಂಜುನಾಥ ಶಂಕಿನದಾಸರ, ಪ.ಪಂ ಸದಸ್ಯರಾದ ಸಂದೀಪ ಕಪ್ಪತ್ತನವರ, ಮಂಜುನಾಥ ಘಂಟಿ, ಫಕ್ಕೀರೇಶ ರಟ್ಟಿಹಳ್ಳಿ, ತಹಸೀಲ್ದಾರ ಅನಿಲ ಬಡಿಗೇರ, ಇಓ ಡಾ. ಎನ್.ಎಚ್ ಓಲೇಕಾರ, ಪಿಎಸ್‌ಐ ಈರಣ್ಣ ರಿತ್ತಿ, ಆರ್.ಡಿ ಕೆಂಚಕ್ಕನವರ, ಹೊನ್ನಗೌಡ ಪಾಟೀಲ, ಸುರೇಶ ಕುಂಬಾರ, ಬಸವರಾಜ ನಾಯ್ಕರ, ಬಸವಂತಪ್ಪ ಬಾಗೇವಾಡಿ, ಯಲ್ಲಪ್ಪ ಬಂಗಾರಿ, ಮಲ್ಲೇಶ ತಳವಾರ ಮುಂತಾದವರು ಉಪಸ್ಥಿತರಿದ್ದರು.

### ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಅಭಿಪ್ರಾಯ

# ಮಹರ್ಷಿ ವಾಲ್ಮೀಕಿ ಮಾನವ ಕುಲಕ್ಕೆ ಆದರ್ಶ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಜಾತಿ, ವರ್ಗ, ಶೋಷಣೆ ರಹಿತ, ಸಮಬಾಳು-ಸಮಪಾಲಿನ ರಾಮರಾಜ್ಯದ ಪರಿಕಲ್ಪನೆ ಸಮಾಜಕ್ಕೆ ತಿಳಿಸಿದ ಮಹಾಕವಿ ವಾಲ್ಮೀಕಿ ಮಹರ್ಷಿಗಳು ಕೇವಲ ಒಂದು ಜಾತಿ, ಜನಾಂಗಕ್ಕೆ ಸೀಮಿತವಾಗಿರದೇ ಇಡೀ ಮಾನವ ಕುಲಕ್ಕೆ ಆದರ್ಶ ಹಾಗೂ ಅನುಕರಣೀಯ ಮಾಹಾನ್ ಚೇತನರಾಗಿದ್ದಾರೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಅಭಿಪ್ರಾಯಪಟ್ಟರು.

ಅವರು ಶನಿವಾರ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ತಾಲೂಕಾಡಳಿತದಿಂದ, ಲಕ್ಷ್ಮೇಶ್ವರ ತಾಲೂಕು ಶ್ರೀ ಮಹರ್ಷಿ ವಾಲ್ಮೀಕಿ ಸಂಘದ ಸಹಯೋಗದಲ್ಲಿ ನಡೆದ ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಜಾತಿ-ಧರ್ಮದ ಮೌಢ್ಯದಿಂದ ಹೊರಬಂದು, ಮೌಲ್ಯಾಧಾರಿತ ಮತ್ತು ಸರ್ವ ಜನಾಂಗದ ಶಾಂತಿಯ ತೋಟದ ಸಮಾಜ ರೂಪಿಸಬೇಕೆಂಬುದು ಮಹರ್ಷಿ ವಾಲ್ಮೀಕಿಯವರ ಆಶಯವಾಗಿತ್ತು. ಆದಿಕವಿ ವಾಲ್ಮೀಕಿ ಅವರು ರಚಿಸಿದ ಮಹಾನ್ ಕಾವ್ಯ ರಾಮಾಯಣ ಭಾರತಕ್ಕಷ್ಟೇ ಅಲ್ಲದೆ, ಇಡೀ ಜಗತ್ತಿಗೆ ಶ್ರೇಷ್ಠ ಸಂಸ್ಕೃತಿಯ ಕೊಡುಗೆಯಾಗಿದೆ. ಸಮಸ್ತ ಮನುಕುಲದ ಹಿತಕ್ಕಾಗಿ ಅವರು ತಿಳಿಸಿದ ತತ್ವಾದರ್ಶ, ಮಾನವೀಯ ಮೌಲ್ಯ ಮತ್ತು ಸಾರ್ವಕಾಲಿಕ ನೀತಿಶಾಸ್ತ್ರಗಳ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳೋಣ ಎಂದರು.

ತಾಲೂಕಾ ವಾಲ್ಮೀಕಿ ಸಮಾಜದ ಅಧ್ಯಕ್ಷ ಭೀಮಪ್ಪ ಯಂಗಾಡಿ ಮಾತನಾಡಿದರು. ತಾ.ಪಂ ಇಓ ಕೃಷ್ಣಪ್ಪ ಧರ್ಮರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶರಣಯ್ಯ ಕುಲಕರ್ಣಿ, ಸಿಪಿಐ ನಾಗರಾಜ ಮಾಡಳ್ಳಿ, ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ, ಮಾಜಿ ಶಾಸಕರಾದ ಜಿ.ಎಸ್ ಗಡ್ಡದೇವರಮಠ, ರಾಮಣ್ಣ ಲಮಾಣಿ, ಮುಖಂಡರಾದ ಟಿ. ಈಶ್ವರ, ಅಶ್ವಿನಿ ಅಂಕಲಕೋಟಿ, ಎನ್.ಎನ್ ನೆಗಳೂರ, ಕೆ.ಓ ಹೂಲಿಕಟ್ಟಿ, ಫಕ್ಕೀರೇಶ ಮ್ಯಾಟಣ್ಣವರ, ಕಲ್ಲಪ್ಪ ಗಂಗಣ್ಣವರ, ಪ್ರಕಾಶ ಬೆಂತೂರ, ಚಂದ್ರು ತಳವಾರ, ಎಸ್.ಡಿ ತಳಗೇರಿ, ರಾಜಶೇಖರ ಮೇಲ್ಮುರಿ, ಹನುಮಂತ ಜಾಲಿಮರದ, ರಾಜು ಓಲೇಕಾರ, ಬಿ.ಎಂ ಕಾತ್ರಾಳ, ಆರ್.ಎನ್ ಶಿರಹಟ್ಟಿ, ಸಂತೋಷ, ಸಂತೋಷ ಮೇಲ್ಮುರಿ, ಯಲ್ಲಪ್ಪ ತಳವಾರ, ರಾಮಣ್ಣ ಕಲಕೋಟಿ ಹಾಗೂ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಮುಖಂಡರು ಉಪಸ್ಥಿತರಿದ್ದರು. ಗೀತಾ ಕರೆಮ್ಮನವರ ಉಪನ್ಯಾಸ ನೀಡಿದರು. ಎಫ್.ಎಸ್ ತಳವಾರ, ಬಸವರಾಜ ಗಳಗನಾಥ ನಿರೂಪಿಸಿದರು. ಬೆಳಿಗ್ಗೆ ಪಟ್ಟಣದ ಪಂಪ ವೃತ್ತದಿಂದ ಪ್ರಮುಖ ಮಾರ್ಗದಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದ ಮೆರವಣಿಗೆಯನ್ನು ನಂದಿಕೋಲು, ವಾದ್ಯಮೇಳದೊಂದಿಗೆ ನೆರವೇರಿಸಲಾಯಿತು.

> ಸರ್ವ ಜನಾಂಗದ ಆದರಣೀಯರಾದ ವಾಲ್ಮೀಕಿ ಅವರನ್ನು ಒಂದು ಜನಾಂಗಕ್ಕೆ ಸೀಮಿತಗೊಳಿಸಬಾರದು. ಅವರ ಸಾರ್ವಕಾಲಿಕ ಜೀವನ ಮೌಲ್ಯಗಳು ಸರ್ವಜನಾಂಗಕ್ಕೂ ದಾರಿದೀಪವಾಗಿದೆ. ವಾಲ್ಮೀಕಿ ಜನಾಂಗದವರು ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡುವ ಮೂಲಕ ಶೈಕ್ಷಣಿಕ, ರಾಜಕೀಯ, ಆರ್ಥಿಕ, ಔದ್ಯೋಗಿಕ ಹಾಗೂ ಸಾಮಾಜಿಕವಾಗಿ ಉನ್ನತ ಸ್ಥರಕ್ಕೆ ತಲುಪಿಸುವ ಜೊತೆಗೆ ಸಮಾಜದ ಪ್ರಮುಖ ಅಂಗವಾಗಿ ಗುರುತಿಸಿಕೊಳ್ಳುವಂತಾಗಬೇಕು.
> **- ಮಂಜುನಾಥ ಅಮಾಸಿ.**
> ತಹಸೀಲ್ದಾರರು, ಲಕ್ಷ್ಮೇಶ್ವರ.

## ಇಂದು 1ನೇ ಜಿಲ್ಲಾ ಮಟ್ಟದ ರೂಲರ್ ಸ್ಕೇಟಿಂಗ್ ಆಯ್ಕೆ ಪ್ರಕ್ರಿಯೆ

▸▸ಮೊದಲನೇ ಪುಟದಿಂದ

ಜಿಲ್ಲಾ ಕ್ರೀಡಾಂಗಣದ ಸ್ಕೇಟಿಂಗ್ ಅಂಕಣದಲ್ಲಿ ಮಧ್ಯಾಹ್ನ 3ರಿಂದ ರಾತ್ರಿ 8 ಗಂಟೆಯವರೆಗೆ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಮಂಜುನಾಥ ಕುರಿ ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಎಸ್ ವಿ ಸಂಕನೂರ್ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಧಾರವಾಡ ಜಿಲ್ಲಾ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಮತ್ತು ಕೆ ಆರ್ ಎಸ್ ಎ ಹಾಗೂ ಇಸಿ ಮೆಂಬರ್ ಮಲ್ಲಿಕಾರ್ಜುನ ಕಾಡಪ್ಪನವರ್ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಯಾಗಿ ರಾಜ್ಯ ವೈದ್ಯಕೀಯ ಪ್ರಕೋಷ್ಠ ಬಿಜೆಪಿ ಸಂಚಾಲಕರಾದ ಡಾ. ಮಹೇಶ್ ನಾಲ್ವಾಡ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ಶರಣು ಗೋಗೇರಿ ಹಾಗೂ ಖ್ಯಾತ ಹೋಮಿಯೋಪತಿ ತಜ್ಞರಾದ ಡಾ. ಸುಭಾಷ್ ಶಿವನಗೌಡ ಸೇರಿದಂತೆ ಅನೇಕರು ಉಪಸ್ಥಿತರಿರಲಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ನಿತ್ಯ ವಿಜಯ ಫೌಂಡೇಶನ್‌ನ ಸಂಸ್ಥಾಪಕರಾದ ಸುಭಾಷ್ ಶಿವನಗೌಡ, ಬಸನಗೌಡ ಉಮಚಗಿ, ಪ್ರಜ್ವಲ್ ರಾಜ್, ಮಾಧು ಹಾದಿಮನಿ, ಮಂಜುಳಾ ಅವನೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಹರ್ಷಿಗಳು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯಿರಿ



**■ವಿಜಯಸಾಕ್ಷಿ ಸುದ್ದಿ, ನರಗುಂದ**

ವಾಲ್ಮೀಕಿ ರಾಮಾಯಣ ಗ್ರಂಥವು ನಮ್ಮ ದೇಶದ ಶಕ್ತಿಯಾಗಿದೆ. ಸತ್ಯದ ಮಾರ್ಗವನ್ನು ಕಂಡುಕೊಳ್ಳಲು ಹುತ್ತವನ್ನು ಭೇದಿಸಿ ಬಂದಿದ್ದಕ್ಕಾಗಿ ಅವರಿಗೆ ವಾಲ್ಮೀಕಿ ಮಹರ್ಷಿಗಳು ಎಂದು ಹೆಸರು ಬಂದಿದೆ. ಸಮಾಜ ಭಾಂದವರು ಮಹರ್ಷಿಗಳು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯಬೇಕೆಂದು ಭಾಜಪ ಯುವ ಮುಖಂಡ ಉಮೇಶಗೌಡ ಪಾಟೀಲ ಹೇಳಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಕಂದಾಯ ಇಲಾಖೆ, ತಾಲೂಕಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಮತ್ತು ಪುರಸಭೆ ಹಾಗೂ ತಾಲೂಕಾ ಮಹರ್ಷಿ ಶ್ರೀ ವಾಲ್ಮೀಕಿ ಸಂಘ ಇವರ ಆಶ್ರಯದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದಲ್ಲಿ ಮಾತನಾಡಿದ ಅವರು, ಹಿಂದಿನ ಭಾಜಪಾ ಸರಕಾರದ ಅವಧಿಯಲ್ಲಿ ಮಾಜಿ ಸಚಿವ ಸಿ ಸಿ ಪಾಟೀಲ ಅವರು ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕಾಗಿ 1 ಕೋಟಿ ಅನುದಾನ ನೀಡಿದ್ದಾರೆ ಎಂದರು.

ಉಪನ್ಯಾಸಕ ಎಸ್ ಜಿ ಮಣ್ಣೂರಮಠ ಮಾತನಾಡಿ, ಕಾಡಿನಲ್ಲಿನೊಬ್ಬ ರತ್ನಾಕರನೆಂಬ ದರೋಡೆಕೋರ ಜಗತ್ತಿನಲ್ಲಿಯೇ ಜನಮಾನಸದಲ್ಲಿ ನೆನಪು ಉಳಿಯುವಂತಹ ಮಹಾಗ್ರಂಥವನ್ನು ರಚಿಸುತ್ತಾರೆ. ಮನಸ್ಸು ಮಾಡಿದರೆ ಎಂತಹ ಕೆಟ್ಟ ವ್ಯಕ್ತಿಯು ಪರಿವರ್ತನೆಗೊಂಡು ಮಹಾನ್ ವ್ಯಕ್ತಿ ಆಗಬಹುದು. ಇದಕ್ಕೆ ವಾಲ್ಮೀಕಿ ಮಹರ್ಷಿಗಳೇ ಸಾಕ್ಷಿಯಾಗಿದ್ದಾರೆಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಪ್ರವೀಣ ಯಾವಗಲ್ಲ, ಇಓ ಮಂಜುಳಾ ಹಕಾರಿ, ತಹಸೀಲ್ದಾರ ಶ್ರೀಶೈಲ ತಳವಾರ, ಸಿಪಿಐ ಮಂಜುನಾಥ ನಡುವಿನಮನಿ, ಮುಖ್ಯಾಧಿಕಾರಿ ಅಮೀತ, ಕವಿತಾ ಅರ್ಬಾಣದ, ಮಾರುತಿ ಗೊಂದಿ, ಎಸ್ ಬಿ ತಳವಾರ, ಶೇಖಪ್ಪ ಜಗದ, ಮಹಾಂತೇಶ ತಳವಾರ, ವಿವಿಧ ಇಲಾಖೆಗಳ ಹಾಗೂ ಪುರಸಭೆ ಸದಸ್ಯರು ಇದ್ದರು.

### ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವದಲ್ಲಿ ನಿವೃತ್ತ ಉಪನ್ಯಾಸಕ ಎಂ.ಸಿ ಹುಲ್ಲಣ್ಣವರ

## ಮಹರ್ಷಿ ಕೇವಲ ವಾಲ್ಮೀಕಿ ಸಮುದಾಯಕ್ಕೆ ಸೀಮಿತವಲ್ಲ

**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ರಾಮಾಯಣವನ್ನು ರಚಿಸಿದ ಮಹರ್ಷಿ ವಾಲ್ಮೀಕಿ ಅವರ ಕೊಡುಗೆ ಅನನ್ಯವಾದದ್ದು. ಮಹರ್ಷಿಗಳ ತತ್ವಾದರ್ಶಗಳನ್ನು ಜನತೆ ಜೀವನದಲ್ಲಿ ಅಳವಡಿಸಿಕೊಳ್ಳಲು ಮುಂದಾಬೇಕು ಎಂದು ನಿವೃತ್ತ ಉಪನ್ಯಾಸಕ ಎಂ.ಸಿ ಹುಲ್ಲಣ್ಣವರ ಹೇಳಿದರು.

ಕಂದಾಯ ಇಲಾಖೆ, ತಾ.ಪಂ, ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಪುರಸಭೆ, ಪಟ್ಟಣ ಪಂಚಾಯಿತಿ ಸೇರಿದಂತೆ ರೋಣ ತಾಲೂಕಿನ ವಿವಿಧ ಇಲಾಖೆಗಳು ಹಾಗೂ ತಾಲೂಕು ಮಹರ್ಷಿ ವಾಲ್ಮೀಕಿ ಸಂಘದ ಆಶ್ರಯದಲ್ಲಿ ಶನಿವಾರ ಪಟ್ಟಣದ ಡಾ.ಬಾಬು ಜಗಜೀವನರಾಂ ಸಮುದಾಯ ಭವನದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಾಲ್ಮೀಕಿ ಸಮುದಾಯ ಇಂದು ರಾಜ್ಯದಲ್ಲಿ ಸರ್ಕಾರ ರಚನೆ ಅಥವಾ ಪತನಗೊಳಿಸುವಷ್ಟು ಬಲಾಢ್ಯವಾಗಿದೆ ಎಂದ ಅವರು, ಮನುಕುಲದ ಒಳಿತನ್ನು ಬಯಸಿದ ಮಹರ್ಷಿ ವಾಲ್ಮೀಕಿ ಕೇವಲ ವಾಲ್ಮೀಕಿ ಸಮುದಾಯಕ್ಕೆ ಸಿಮೀತವಾಗಿಲ್ಲ. ಸರ್ವ ಸಮುದಾಯಗಳ ಶಾಂತಿ, ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಅವರು ಬರೆದ ರಾಮಾಯಣ ಸಹಕಾರಿಯಾಗಿದೆ. ಗಾಂಧೀಜಿ ಹಾಗೂ ಅಂಬೇಡ್ಕರ್ ಅವರು ರಾಮಾಯಣವನ್ನು ಅಧ್ಯಯನ ಮಾಡಿದ್ದಾರೆ. ಹೀಗಾಗಿ ರಾಮರಾಜ್ಯದ ಪರಿಕಲ್ಪನೆ ಸಾಕಾರದ ಬಗ್ಗೆ ಗಾಂಧೀಜಿ, ಅಂಬೇಡ್ಕರರು ಪ್ರತಿಪಾದಿಸಿದ್ದಾರೆ. ಧರ್ಮ ಮತ್ತು ಸತ್ಯದ ಪರಿಕಲ್ಪನೆಯನ್ನು ಮಹರ್ಷಿ ವಾಲ್ಮೀಕಿ ಅವರು ರಾಮಾಯಣದಲ್ಲಿ ವಿಸ್ತೃತವಾಗಿ ವಿವರಿಸಿದ್ದಾರೆ ಎಂದರು.

ಇದಕ್ಕೂ ಮುನ್ನ ಪಟ್ಟಣದ ಗವಿ ಮಠದಿಂದ ಆರಂಭವಾದ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆಯು ಭಜರಂಗ ವೃತ್ತ, ಬಸವೇಶ್ವರ ವೃತ್ತ, ದುರ್ಗಾ ವೃತ್ತ, ಜೋಡು ರಸ್ತೆ, ಕೆಕೆ ವೃತ್ತ ಮಾರ್ಗವಾಗಿ ಬಸ್ ನಿಲ್ದಾಣದ ಮುಂಭಾಗದಿಂದ ಡಾ.ಬಾಬು ಜಗಜೀವನರಾಂ ಸಮುದಾಯ ಭವನ ತಲುಪಿತು.

ಈ ವೇಳೆ ಸಮಾಜದ ಅಧ್ಯಕ್ಷ ಹನುಮಂತಪ್ಪ ಹಟ್ಟಿಮನಿ, ಪುರಸಭೆ ಸದಸ್ಯ ಶರಣಪ್ಪ ಉಪ್ಪಿನಬೆಟಗೇರಿ, ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ, ತಾ.ಪಂ ಇಒ ಡಾ. ಡಿ.ಮೋಹನ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗೀತಾ ಆಲೂರ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಎಂ.ಎಚ್ ರಂಗಣ್ಣನವರ, ಶರಣು ಪೂಜಾರ, ಲಕ್ಷ್ಮಣ ತಳವಾರ, ಹುಚ್ಚಪ್ಪ ತಳವಾರ, ಭಿಮಣ್ಣ ತಳವಾರ, ನಾಗರಾಜ ತಳವಾರ, ಪ್ರಕಾಶ ಜಿಗಳೂರ, ಕಳಕನಗೌಡ ಗೌಡರ, ಯಮನೂರಪ್ಪ ತಳವಾರ, ಪ್ರಕಾಶ ತಳವಾರ, ರಾಜಕುಮಾರ ಕೋಣನವರ ಮುಂತಾದವರಿದ್ದರು.



## ಬಸವೇಶ್ವರ ಮಹಾವಿದ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಬಸವೇಶ್ವರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಹಾಗೂ ಶ್ರೀ ತೋಂಟದ ಸಿದ್ಧೇಶ್ವರ ಪ.ಪೂ ಮಹಾವಿದ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು.

ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪದವಿಪೂರ್ವ ಮಹಾವಿದ್ಯಾಲಯದ ಉಪಪ್ರಾಚಾರ್ಯ ಪ್ರೊ. ವಾಯ್.ಎಸ್ ಮತ್ತೂರ, ಪದವಿ ಮಹಾವಿದ್ಯಾಲಯದ ಪ್ರೊ. ಶಿಲ್ಪಾ ಮ್ಯಾಗೇರಿ ಮಹರ್ಷಿ ವಾಲ್ಮೀಕಿಯವರ ಜೀವನ ಚರಿತ್ರೆ ಕುರಿತು ವಿವರಿಸುತ್ತಾ, ಉತ್ತಮ ಸಂಕಲ್ಪದಿಂದ ಹಾಗೂ ಮನುಷ್ಯತ್ವದ ಮೌಲ್ಯಗಳನ್ನು ಬೆಳೆಸಿಕೊಳ್ಳುವುದರಿಂದ ಆದರ್ಶ ವ್ಯಕ್ತಿಯಾಗಿ ಬೆಳೆಯಲು ಸಾಧ್ಯ. ಅಲ್ಲದೆ ಉತ್ತಮ ಸಾಧನೆ ಮಾಡಲು ಸಾಧ್ಯವೆನ್ನುವುದಕ್ಕೆ ವಾಲ್ಮೀಕಿಯವರು ರಾಮಾಯಣದಂತಹ ಕೊಡುಗೆ ಕೊಟ್ಟಿರುವುದೇ ನಿದರ್ಶನವೆಂದರು.

ಸಮಾರಂಭದಲ್ಲಿ ಮಹಾವಿದ್ಯಾಲಯದ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು. ಪ್ರೊ. ಎಸ್.ಎಸ್ ಭಜಂತ್ರಿಯವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ವರುಣದೇವನನ್ನು ಪ್ರಾರ್ಥಿಸಿ ಭೂ ತಾಯಿಗೆ ಚರಗ



**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ವರುಣ ದೇವನ ಕೃಪೆಗಾಗಿ ಇಲ್ಲಿಯ ರೈತರು ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸಿ, ಚರಗವನ್ನು ಅರ್ಪಿಸಿದರು. ಮುಂಗಾರು ಮತ್ತು ಹಿಂಗಾರು ಮಳೆ ಬಾರದೇ ಇರುವುದರಿಂದ ರೈತರಲ್ಲಿ ಉತ್ಸಾಹವಿಲ್ಲ. ಆದರೂ ಸಹ ಮಳೆ ದೇವನ ಭರವಸೆ ಹಾಗೂ ಸಂಪ್ರದಾಯವನ್ನು ಮರೆಯದೇ ಈ ಭಾಗದಲ್ಲಿ ಶೀಗಿ ಹುಣ್ಣಿಮೆಯನ್ನು ಆಚರಿಸಿ ಹಿಂಗಾರು ಬೆಳೆಯ ಫಸಲು ಸಮೃದ್ಧಿಯಾಗಿ ಬರಲೆಂದು ಆಚರಿಸಿದರು.

ರೈತರು ಮುಂಜಾನೆಯೇ ತಮ್ಮ ಜಮೀನಿಗೆ ತೆರಳಿ, ಬನ್ನಿ ಮರಕ್ಕೆ ಪೂಜೆ ಸಲ್ಲಿಸಿದರು.

ನಂತರ 5 ಕಲ್ಲು ದೇವರನ್ನು ಪ್ರತಿಷ್ಠಾಪಿಸಿ ನೈವೇದ್ಯವನ್ನು ಅರ್ಪಿಸಿ ಹುಲಿಲೋಗೋ, ಸಲಾಂಬರಿಗೋ ಎಂದು ಹೇಳುತ್ತಾ ಭೂ ತಾಯಿಗೆ ನಮನ ಸಲ್ಲಿಸಿದರು. ಬೆಳೆದ ಬೆಳೆಯು ತೇವಾಂಶವಿಲ್ಲದೇ ಕಮ್ಮರುತ್ತಿರುವುದನ್ನು ಕಂಡು ವರಣ ದೇವನ ಕೃಪೆಯಾಗಲೆಂದು ಕುಟುಂಬ ಸದಸ್ಯರೆಲ್ಲರೂ ಸಾಮೂಹಿಕವಾಗಿ ಪ್ರಾರ್ಥಿಸಿದರು.

## ನಾಳೆ ಗದಗ-ಬೆಟಗೇರಿ ನಗರಸಭೆ ಸಾಮಾನ್ಯ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಕಾರಣಾಂತರಗಳಿಂದ ಮುಂದೂಡಲಾಗಿದ್ದ ಗದಗ-ಬೆಟಗೇರಿ ನಗರಸಭೆಯ ಸಾಮಾನ್ಯ ಸಭೆಯನ್ನು ಅಕ್ಟೋಬರ್ 30 ರಂದು ಮುಂಜಾನೆ 11 ಗಂಟೆಗೆ ನಗರಸಭೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಅದೇ ದಿನ ಮಧ್ಯಾಹ್ನ 12.30 ಗಂಟೆಗೆ ಸಾಮಾನ್ಯ ಸಭೆಯನ್ನು ಜರುಗಿಸಲಾಗುವುದು ಎಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧ ಸಂಘಟನೆಗಳಿಂದ ತುರ್ತು ಸಭೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆಯಿಂದ ಅ.30ರಂದು ನಡೆಯುವ ಸದ್ಯಸರ ಸಭೆಯಲ್ಲಿ ನಗರದ ವಕಾರ ಸಾಲುಗಳನ್ನು ಮತ್ತೆ ಮೂಲ ಮಾಲಕರಿಗೆ ನೀಡುವ ವಿಷಯವನ್ನು ಅಜೆಂಡಾದಲ್ಲಿ ಸೇರ್ಪಡೆ ಮಾಡಿರುವ ವಿಷಯ ತಿಳಿದು ಗದಗ ಜಿಲ್ಲೆಯ ವಿವಿಧ ಸಂಘಟನೆಗಳ ಪದಾಧಿಕಾರಿಗಳು ನಗರದ ಪ್ರವಾಸಿ ಮಂದಿರದಲ್ಲಿ ಶನಿವಾರ ತುರ್ತು ಸಭೆ ನಡೆಸಿದರು.

ಸುಮಾರು 36 ಎಕರೆ ವಿಸ್ತೀರ್ಣ ಹೊಂದಿರುವ 54 ವಕಾರ ಸಾಲುಗಳನ್ನು ಸರ್ಕಾರ 8 ವರ್ಷಗಳ ಹಿಂದೆಯೇ ತೆರವುಗೊಳಿಸಿದ್ದು, ಈಗ ಮತ್ತೆ ಈ ವಿಷಯ ತೆಗೆದುಕೊಂಡಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿದರು.

ಈ ಸಭೆಗೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸುವುದಾಗಿ ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಆಟೋ ಚಾಲಕ-ಮಾಲಕರ ಸಂಘದಿಂದಲೂ ಪ್ರತಿಭಟನೆ ನಡೆಸಲು ತೀರ್ಮಾನಿಸಿದರು.

ಸಭೆಯಲ್ಲಿ ಪ್ರಮುಖರಾದ ಚಂದ್ರಕಾಂತ್ ಚವಾಣ್, ಶರಣು ಗೋಡಿ, ಭಾಷಾಸಾಬ ಮಲ್ಲಸಮುದ್ರ, ವಿಜಯ್ ಕಲ್ಮನಿ, ರಾಘವೇಂದ್ರ ಪರಾಪುರ, ಗಣೇಶ ಹುಬ್ಬಳ್ಳಿ, ಮಂಜುನಾಥ ಪರ್ವತಗೌಡ್ರ, ರಾಘು ಪೂಜಾರ್, ಬಸವರಾಜ್ ಮಾದುಗುಂಡಿ, ಪರಶುರಾವ್ ಪೂಜಾರಿ, ನಿಂಗನಗೌಡ್ರು, ಶೌಕತ್, ನಾಗರಾಜ್ ಕ್ಷತ್ರಿಯ, ರಾಜು ಪೂಜಾರ್ ಮುಂತಾದವರು ಉಪಸ್ಥಿತರಿದ್ದರು.

# ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹುಬ್ಬಳ್ಳಿ ರಸ್ತೆಯಲ್ಲಿರುವ ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಕಾರ್ಯಾಲಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿಧಾನ ಪರಿಷತ್ ಸದಸ್ಯರಾದ ಎಸ್.ವ್ಹಿ ಸಂಕನೂರ ಮಾತನಾಡಿ, ಶ್ರೀ ಮಹರ್ಷಿ ವಾಲ್ಮೀಕಿ ರಾಮಾಯಣವನ್ನು ಬರೆದು ಜಗತ್ತಿಗೆ ಮಾದರಿಯಾದರು. ಇಂತಹ ಮಹಾನ್ ವ್ಯಕ್ತಿಯ ಜಯಂತ್ಯುತ್ಸವವನ್ನು ಸರ್ವರೂ ಅತ್ಯಂತ ಹೆಮ್ಮೆಯಿಂದ ಆಚರಿಸುವಂತಾಗಲಿ ಎಂದರು.

ಬಿಜೆಪಿ ಗದಗ ಜಿಲ್ಲಾಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ, ಎಂ.ಎಸ್ ಕರೀಗೌಡ್ರ, ಈಶಪ್ಪ ನಾಯ್ಕರ, ರವಿ ದಂಡಿನ ಮುಂತಾದವರು ಸಂದರ್ಭೋಚಿತವಾಗಿ ಶ್ರೀ ಮಹರ್ಷಿ ವಾಲ್ಮೀಕಿಯವರ ಕುರಿತು ಮಾತನಾಡಿದರು.

ಬಿಜೆಪಿ ಎಸ್.ಟಿ ಮೋರ್ಚಾ ಜಿಲ್ಲಾಧ್ಯಕ್ಷ ಈಶ್ವರಪ್ಪ ರಂಗಪ್ಪನವರ ಮಾತನಾಡಿ, ಶ್ರೀ ಮಹರ್ಷಿ ವಾಲ್ಮೀಕಿಯವರ ದಿನಾಚಾರಣೆಯನ್ನು ಆರಂಭಿಸಿದ ಜನಪ್ರಿಯ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಹಾಗೂ ಮಾಜಿ ಸಚಿವ ಬಿ.ಶ್ರೀರಾಮುಲು ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಅನಿಲ ಅಬ್ಬಿಗೇರಿ, ನಗರಸಭಾಧ್ಯಕ್ಷೆ ಉಷಾ ದಾಸರ, ಪ್ರಶಾಂತ ನಾಯ್ಕರ, ಸುನಂದಾ ಬಾಕಳೆ, ಮಂಜುನಾಥ ತಳವಾರ, ಜಗನ್ನಾಥಸಾ ಭಾಂಡಗೆ, ತೊಟೊಸಾ ಭಾಂಡಗೆ, ರಾಜಕುಮಾರ ಕಟ್ಟಿಮನಿ, ಸುರೇಶ ಮರಳಪ್ಪನವರ, ಮಂಜುನಾಥ ಶಾಂತಗೇರಿ, ನವೀನ ಕೊಟೆಕಲ್, ರಾಹುಲ್ ಸಂಕಣ್ಣವರ, ರಮೇಶ ಸಜ್ಜಗಾರ, ಮಹೇಶ ದಾಸರ, ನಾಗರಾಜ ತಳವಾರ, ಶಂಕರ ಕಾಕಿ, ಚಾಂದಸಾಬ ಕೊಟ್ಟೂರ, ಮುತ್ತಪ್ಪ ಮೂಲಿಮನಿ, ಕೆ.ಪಿ ಕೋಟಿಗೌಡ್ರ, ಅಪ್ಪಣ್ಣ ಟೆಂಗಿನಕಾಯಿ, ಡಾ. ಕಮಲಾಕ್ಷೀ ಅಂಗಡಿ, ಕವಿತಾ ಬಂಗಾರಿ ಮುಂತಾದ ಪ್ರಮುಖರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಎಸ್.ಟಿ ಮೋರ್ಚಾ ಗದಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಾಯ್.ಪಿ ಅಡ್ನೂರ ನಿರೂಪಿಸಿದರು. ಯಲ್ಲಪ್ಪ ಶೀರಿ ವಂದಿಸಿದರು.

# ಮನುಕುಲದ ಏಳ್ಗೆ ಬಯಸಿದ ಜ್ಯೋತಿ ಮಹರ್ಷಿ ವಾಲ್ಮೀಕಿ



■ವಿಜಯಸಾಕ್ಷಿ ಸುದ್ದಿ, ರೋಣ

ಮಾನವ ಕುಲದ ಏಳ್ಗೆಯನ್ನು ಬಯಸಿದ ಮಹರ್ಷಿ ವಾಲ್ಮೀಕಿ ಋಷಿಗಳು ದೇವ ಮಾನವರಾಗಿದ್ದು, ಅವರ ತತ್ವ-ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಪುರಸಭೆಯ ಉಪಾಧ್ಯಕ್ಷ ಸಂಗನಗೌಡ ಪಾಟೀಲ ಹೇಳಿದರು.

ಅವರು ಶನಿವಾರ ಮಹರ್ಷಿ ವಾಲ್ಮೀಕಿ ಜಯಂತ್ಯುತವದ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಹಾನ್ ದೇವಮಾನವರ ಆಚರಣೆಗಳ ಜೊತೆಗೆ ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲ ಸಾಗಬೇಕಿದೆ.

ಮಹರ್ಷಿಗಳು ಜಗತ್ತಿನಲ್ಲಿರುವ ಮಾನವ ಕುಲದ ಏಳ್ಗೆಯನ್ನು ಬಯಸಿದ ಜ್ಯೋತಿಯಾಗಿದ್ದು, ಅವರ ಆಚರಣೆಯಲ್ಲಿ ಎಲ್ಲರೂ ಭಾಗಿಯಾಗಬೇಕು ಎಂದರು.

ಭವ್ಯ ಮೆರವಣಿಗೆಯ ಮುನ್ನ ತಾಲೂಕಾಡಳಿತದಿಂದ ತಹಸೀಲ್ದಾರ್ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಲಾಯಿತು. ಶಾಸಕರ ಕಾರ್ಯಾಲಯ, ತಾಲೂಕಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಠಾಣೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಜಯಂತ್ಯುತ್ಸವವನ್ನು ಆಚರಿಸಲಾಯಿತು.

ವಾಲ್ಮೀಕಿ ಸಮಾಜದ ತಾಲೂಕಾಧ್ಯಕ್ಷ ಬಸವರಾಜ ತಳವಾರ, ಕುಮಾರ ಗೌಡನ್ನವರ, ಸಂಜಯ ದೊಡ್ಡಮನಿ, ಶ್ರೀಧರ ನಾಯಕ, ತಹಸೀಲ್ದಾರ್ ನಾಗರಾಜ ಕೆ., ಇಓ ರವಿ ಎ.ಎನ್, ಪಿಡಬ್ಲುಡಿ ಇಇ ಬಲವಂತಪ್ಪ ನಾಯ್ಕರ, ಎಸ್.ಬಿ ಹರ್ತಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಶಿವಸಂಗಮ ಗ್ರೂಪ್ಸ್ ವಾರ್ಷಿಕೋತ್ಸವದಲ್ಲಿ ಪ್ರೊ. ದಲಾಲಿ ಅಭಿಪ್ರಾಯ

# ದುಡಿಮೆಯ ಆದಾಯ ಉಳಿಕೆ-ಗಳಿಕೆಯಾಗಲಿ

■ವಿಜಯಸಾಕ್ಷಿ ಸುದ್ದಿ, ಗದಗ

ದುಡಿಮೆಯಿಂದ ಬರುವ ಆದಾಯದಲ್ಲಿ ಉಳಿಕೆ, ಗಳಿಕೆ ಆಗಬೇಕು. ಅದು ಭವಿಷ್ಯದಲ್ಲಿ ಕಷ್ಟ ಕಾಲಕ್ಕೆ ಉಪಯೋಗವಾಗುವದು ಎಂದು ಪ್ರೊ.ವಿರುಪಾಕ್ಷಪ್ಪ ದಲಾಲಿ ಅಭಿಪ್ರಾಯಪಟ್ಟರು.



ಅವರು ಶನಿವಾರ ಗದುಗಿನ ಶಿವಸಂಗಮ ಗ್ರೂಪ್ಸ್ 15ನೇ ವಾರ್ಷಿಕೋತ್ಸವದ ಅಂಗವಾಗಿ ಗ್ರಾಹಕರಿಗೆ ಬೆಳಕಿನ ಸಂಗಮ ಯೋಜನೆಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಇದು ಸ್ಪರ್ಧಾತ್ಮಕ ಯುಗ, ಗ್ರಾಹಕರು ತಮ್ಮ ಹಣವನ್ನು ತೊಡಗಿಸುವಲ್ಲಿ ವಿಶ್ವಾಸಕ್ಕೆ ಅರ್ಹತೆಯನ್ನು ಪಡೆದ ಸಂಸ್ಥೆಯನ್ನು ಹುಡುಕುತ್ತಾರೆ. ಮೋಸ ಆಗದ, ಹಣ ಕಳೆದುಕೊಳ್ಳಲಾರದಂತಹ ಸಂಸ್ಥೆಯನ್ನು ಸಂಪರ್ಕಿಸುವರು. ಗದುಗಿನ ಶಿವಸಂಗಮ ಗ್ರುಫ್ಸ್ ಇದುವರೆಗೂ ಉತ್ತರ ಕರ್ನಾಟಕದಲ್ಲಿ 13 ಶಾಖೆಗಳನ್ನು ತೆರೆದು ಗ್ರಾಹಕರಿಗೆ ಸೇವೆ ಒದಗಿಸುತ್ತ ವಿಶ್ವಾಸ ಗಳಿಸಿದೆ ಎಂದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ ದೇಸಾಯಿಮಠ ಯೋಜನೆ-ಪ್ರಯೋಜನೆ ವಿವರಿಸಿ ಸಣ್ಣ ಉಳಿತಾಯದಿಂದ ಆಗುವ ಹೆಚ್ಚು ಲಾಭವನ್ನು ಗ್ರಾಹಕರಿಗೆ ಮನವರಿಕೆ ಮಾಡಿದರು. ನಿರ್ದೇಶಕರಾದ ವ್ಹಿ.ಎಸ್.ಶಿವಕಾಳಿಮಠ, ಎಂ.ಬಿ.ಲಿಂಗದಾಳ, ಮಹೇಶ ಗಾಣಿಗೇರ ಶಿವಸಂಗಮ ಸಂಸ್ಥೆಯು ಜನಮುಖಿ, ಸಮಾಜಮುಖಿಯಾಗಿ ಸೇವೆ ಸಲ್ಲಿಸುತ್ತ ಬಂದಿರುವದನ್ನು ಹಾಗೂ ಸಣ್ಣ, ಮಧ್ಯಮ ವ್ಯಾಪಾರಸ್ಥರಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರು ಆರ್ಥಿಕವಾಗಿ ಸ್ವಾವಲಂಭಿಯಾಗಲು ನೆರವಾಗಿದ್ದನ್ನು ವಿವರಿಸಿದರು.

ಗ್ರಾಹಕರ ಪ್ರತಿನಿಧಿಯಾಗಿ ಉಮಾಪತಿ ಭೂಸನೂರಮಠ, ಮಹೇಶ ಕುಂದ್ರಾಳಹಿರೇಮಠ, ಶರಣಪ್ಪ ಮೆಣಸಿನಕಾಯಿ, ಗಿರೀಜಾ ಕಿರೇಸೂರ, ಕಾಶಪ್ಪ ಮುಳ್ಳಾಳ, ಮಹ್ಮದ್‌ರಫಿ ರಾಯಚೂರ ಮಾತನಾಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಜಿ.ಎಂ.ಪಲ್ಲೇದ, ಸಣ್ಣಪುಟ್ಟ ವ್ಯಾಪಾರ, ವಹೀವಾಟು ಮಾಡುವವರಿಗೆ ಆರ್ಥಿಕ ನೆರವು ನೀಡುತ್ತ ಬಂದಿರುವ ಸಂಸ್ಥೆ ಇಂದು ಬೃಹತ್ ಸಂಸ್ಥೆಯಾಗಿ ಎಲ್ಲರ ವಿಶ್ವಾಸಕ್ಕೆ ಪಾತ್ರವಾಗಿದೆ. ಉತ್ತಮ ಗುಣಮಟ್ಟದ ವಿವಿದ ಉತ್ಪಾದನೆಗಳನ್ನೂ ನಡೆಸಿ ಗ್ರಾಹಕರಿಗೆ ಒಳ್ಳೆ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ಸಂಸ್ಥೆಯ ಶ್ರೇಯೋಭಿವೃದ್ಧಿಯಲ್ಲಿ ಗ್ರಾಹಕರ ಪಾತ್ರ, ವಿಶ್ವಾಸ ಹಿರಿದಾದದ್ದು ಎಂದರು. ಮಹೇಶ ಕುಂದ್ರಾಳಹಿರೇಮಠ ಪ್ರಾರ್ಥಿಸಿದರು, ವ್ಯವಸ್ಥಾಪಕ ಬಸವರಾಜ ಹಳ್ಳಿಕೇರಿ ಸ್ವಾಗತಿಸಿದರು.

ತಿಮ್ಮಾರೆಡ್ಡಿ ಸಂಶಿ ನಿರೂಪಿಸಿದರು. ಕೊನೆಗೆ ಉಮೇಶ ಅಂಗಡಿ ವಂದಿಸಿದರು. ಸಂಸ್ಥೆಯ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ಮಹರ್ಷಿ ವಾಲ್ಮೀಕಿ ಜೀವನ ಮೌಲ್ಯ ಸಾರಿದ ಮಹಾತ್ಮರು

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಜೀವನಕ್ಕೆ ಬೇಕಾದ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ವಾಲ್ಮೀಕಿಯವರು ಸಾಮಾಜಿಕ ಮೌಲ್ಯಗಳನ್ನು ಸಾರಿದ ಮಹಾತ್ಮರು ಎಂದು ನಿವೃತ್ತ ಪ್ರಾಧ್ಯಾಪಕ ಎ.ವೈ ನವಲಗುಂದ ಹೇಳಿದರು.

ಪಟ್ಟಣದ ತಹಸೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಆಡಳಿತ, ತಾ.ಪಂ., ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಪುರಸಭೆ ಹಾಗೂ ತಾಲೂಕು ವಾಲ್ಮೀಕಿ ನಾಯಕ ಸಂಘದ ಸಂಯುಕ್ತ ಆಶ್ರಯದಲ್ಲಿ ಶನಿವಾರ ಜರುಗಿದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಹಸೀಲ್ದಾರ್ ಧನಂಜಯ ಎಂ., ನಿವೃತ್ತ ಮುಖ್ಯ ಶಿಕ್ಷಕ ಎಚ್.ಡಿ ಪೂಜಾರ, ಪುರಸಭೆ ಸದಸ್ಯ ನಾಗರಾಜ ಹೊಂಬಳಗಟ್ಟಿ, ಬಿ.ಎಫ್ ಈಟಿ, ಚಂದ್ರಶೇಖರ ಪೂಜಾರ ಮಾತನಾಡಿದರು. ಎಸ್ಸೆಸ್ಸೆಲ್ಸಿ, ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಎಸ್ಟಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ಗೌರವಿಸಿ, ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ತಾಲೂಕು ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ರಾಮಣ್ಣ ಕೋಳಿ, ಮೈಲಾರಪ್ಪ ಕಲಕೇರಿ, ದ್ಯಾಮಣ್ಣ ವಾಲಿಕಾರ, ಜ್ಯೋತಿ ಹಾನಗಲ್ಲ, ಪವನ ಮೇಟಿ, ರಾಜಾಭಕ್ಷಿ ಬೆಟಗೇರಿ, ವಿಶ್ವನಾಥ ಹೊಸಮನಿ, ಎಂ.ಎ ನೂರುಲ್ಲಾಖಾನ್, ಗಂಗಾಧರ ಅಣ್ಣಿಗೇರಿ, ಡಾ.ಬಿ.ಎಸ್ ಮೇಟಿ, ವಿ.ಎಸ್ ಗಟ್ಟಿ, ಮಂಜುನಾಥ ಕುಸಗಲ್ಲ ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಉದಯಕುಮಾರ ಯಲಿವಾಳ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ವೈ.ಎ ನಾಗಮ್ಮನವರ ನಿರೂಪಿಸಿದರು.

ರಾಜ್ಯೋತ್ಸವ ಆಚರಣೆಗೆ ಗಡಿನಾಡು ಬೆಳಗಾವಿಗೆ ಹೊರಟಿರುವ ನಾಗಬಸಯ್ಯ ಮಳಲೀಮಠ

# ಕನ್ನಡದ ಕಂದನ ಕರುನಾಡ ಯಾತ್ರೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದ್ವಿಚಕ್ರ ವಾಹನವನ್ನು ಕನ್ನಡ ರಥದಂತೆ ಸಿಂಗರಿಸಿಕೊಂಡು, ರಥಕ್ಕೆ ಕನ್ನಡ ಬಾವುಟ, ಡಾ.ವಿಷ್ಣುವರ್ಧನರ ಭಾವಚಿತ್ರಗಳಿಂದ ಅಲಂಕರಿಸಿ, ಕನ್ನಡದ ಹಾಡುಗಳನ್ನು ಮೊಳಗಿಸುತ್ತಾ ನಾಡು ಸುತ್ತುತ್ತಿರುವ ರಾಣೆಬೆನ್ನೂರು ತಾಲ್ಲೂಕಿನ ಐರಣಿ ಗ್ರಾಮದ ಜೂನಿಯರ್ ವಿಷ್ಣುವರ್ಧನ್ ಎಂದೇ ಖ್ಯಾತರಾಗಿರುವ ನಾಗಬಸಯ್ಯ ಮಳಲೀಮಠ ಅವರನ್ನು ಪಟ್ಟಣದಲ್ಲಿ ಕನ್ನಡಾಭಿಮಾನಿಗಳು ಸ್ವಾಗತಿಸಿದರು. ಶನಿವಾರ ಲಕ್ಷ್ಮೇಶ್ವರದಲ್ಲಿ ಶೀಗೆ ಹುಣ್ಣಿಮೆ ಹಬ್ಬ ಆಚರಿಸುತ್ತಿದ್ದ ರೈತರು ಇವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಹಬ್ಬದ ಊಟ ಉಣಬಡಿಸಿ ಗೌರವಿಸಿದರು.





> ಕನ್ನಡಿಗರಾದ ನಾವೆಲ್ಲ ಕನ್ನಡದಲ್ಲಿ ಮಾತನಾಡಬೇಕು. ಕನ್ನಡ ಭಾಷೆ, ನೆಲ, ಜಲದ ಬಗ್ಗೆ ಜಾಗೃತಿ ಮೂಡಿಸುವ ಈ ರಥ ಯಾತ್ರೆಗೆ ಮಾರ್ಗಮಧ್ಯದಲ್ಲಿ ಕನ್ನಡಪರ ಸಂಘಟನೆಯವರು, ಕನ್ನಡಾಭಿಮಾನಿಗಳು, ರೈತರು, ಜನಸಾಮಾನ್ಯರು, ಯುವಕರು ಉತ್ತಮ ಸ್ಪಂದನೆ ನೀಡುತ್ತಿದ್ದಾರೆ. ಎಲ್ಲರೂ ಆತ್ಮೀಯವಾಗಿ ಬರಮಾಡಿಕೊಂಡು ಆತಿಥ್ಯ ನೀಡುವ ಪರಿಪಾಠ ನಮ್ಮ ಕನ್ನಡ ನಾಡಿನಲ್ಲಿ ಮಾತ್ರ ಸಿಗುತ್ತದೆ. ಅದು ಕನ್ನಡಿಗರ ಸಂಸ್ಕೃತಿಯೂ ಆಗಿದ್ದು, ಆರೋಗ್ಯ ಗಟ್ಟಿಯಾಗಿರುವವರೆಗೂ ಕನ್ನಡ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತೇನೆ.
>
> – **ನಾಗಬಸಯ್ಯ ಮಳಲಿಮಠ.**
> ಕನ್ನಡಾಭಿಮಾನಿ, ಹೋರಾಟಗಾರರು.

ಕನ್ನಡ ನಾಡು, ನುಡಿ, ಜಲ ಮತ್ತು ಸಂಸ್ಕೃತಿಯ ಉಳಿವು, ಕಾವೇರಿ ನೀರಿನ ರಕ್ಷಣೆ ಹಾಗೂ ಇಂಗ್ಲಿಷ್ ನಾಮಫಲಕ ತೆರವುಗೊಳಿಸುವ ನಿಟ್ಟಿನಲ್ಲಿ ಕನ್ನಡದ ರಥ ಯಾತ್ರೆಯ ಮೂಲಕ ಕನ್ನಡ ಜಾಗೃತಿ ಮೂಡಿಸುವ ಪ್ರಯತ್ನವನ್ನು ಕಳೆದ 9 ವರ್ಷಗಳಿಂದ ಮಾಡುತ್ತಿದ್ದಾರೆ. ಈ ವರ್ಷ ಗಡಿನಾಡಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲು ರಾಜಧಾನಿ ಬೆಂಗಳೂರಿನಿಂದ ಬೆಳಗಾವಿ ಜಿಲ್ಲೆಯವರೆಗೆ ದ್ವಿಚಕ್ರ ವಾಹನದಲ್ಲಿ ಸಂಚಾರ ಕೈಗೊಂಡಿದ್ದು, ರಾಜ್ಯೋತ್ಸವವನ್ನು ಗಡಿಭಾಗದಲ್ಲಿ ಆಚರಿಸಲು ಹೊರಟಿದ್ದಾರೆ. ಮಾರ್ಗ ಮಧ್ಯ ಕನ್ನಡ ಜಾಗೃತಿ ಮೂಡಿಸುತ್ತಾ ದ್ವಿಚಕ್ರ ವಾಹನದಲ್ಲಿ ಕನ್ನಡ ರಥ ಹೊರಟಿದೆ.

ಬೆಂಗಳೂರು, ತುಮಕೂರು, ಹಿರಿಯೂರು, ಚಿತ್ರದುರ್ಗ, ಹಾವೇರಿ, ಲಕ್ಷ್ಮೇಶ್ವರ, ಧಾರವಾಡ ಮಾರ್ಗವಾಗಿ ಬೆಳಗಾವಿಯ ಗಡಿಯವರೆಗೆ ರತಯಾತ್ರೆಯ ಮೂಲಕ ಕನ್ನಡದ ಝೇಂಕಾರ ಮೊಳಗಿಸುತ್ತಾ ಸಾಗಲಿದೆ. ಬೈಕ್(ಕನ್ನಡದ ರಥ)ನಲ್ಲಿ ಡಾ.ವಿಷ್ಣುವರ್ಧನ್‌ರ ವಿವಿಧ ಭಾವಚಿತ್ರಗಳು, ಜ್ಞಾನಪೀಠ ಪುರಸ್ಕೃತರ ಹಾಗೂ ಕವಿಗಳ ಭಾವಚಿತ್ರಗಳು ಜೊತೆಗೆ ಸಂಚಾರ ನಿಯಮವನ್ನು ಪಾಲನೆ ಮಾಡುವ ಚಿತ್ರಗಳು ಗಮನ ಸೆಳೆಯುತ್ತವೆ. ವಿವಿಧ ಕನ್ನಡದ ಸಂಕೇತಗಳಿಂದ ರಥ ಕಂಗೊಳಿಸುತ್ತಿದೆ. ನಾಗಬಸಯ್ಯ ಅವರು ಹೋದ ಕಡೆಯಲ್ಲೆಲ್ಲಾ ಕನ್ನಡ ನಾಡು-ನುಡಿಯ ಕುರಿತ ಹಾಡು, ಅಭಿನಯದ ಮೂಲಕ ಕನ್ನಡಾಭಿಮಾನ ಮೂಡಿಸುತ್ತಿದ್ದಾರೆ. ವರ್ಷದ 365 ದಿನ ಕನ್ನಡ ಭಾಷೆ ಉಳಿಸಿ, ಪೋಷಿಸುವ ಇವರು ಕನ್ನಡ ನಾಡಿಗೆ ಅನ್ಯಾಯ ಆದಾಗ ಹೋರಾಟದಲ್ಲಿ ಮುಂಚೂಣಿಯಲ್ಲಿ ಇರುತ್ತಾರೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಇವರು ಪ್ರತಿವರ್ಷ ಅಕ್ಟೋಬರ್ ಹಾಗೂ ನವೆಂಬರ್ ತಿಂಗಳು ಕನ್ನಡ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮೀಸಲಿಡುತ್ತಾರೆ. ಆ ಎರಡು ತಿಂಗಳು ಕಂಪನಿಯಲ್ಲಿ ಇವರಿಗೆ ರಜೆ ನೀಡುತ್ತಾರೆ. ತಮ್ಮ ಸ್ವಂತ ದುಡ್ಡಿನಿಂದ ವಾಹನಕ್ಕೆ ಪೆಟ್ರೋಲ್ ಹಾಕಿಸಿಕೊಂಡು ಕನ್ನಡ ಜಾಗೃತಿ ಮೂಡಿಸುತ್ತಿರುವ ಇವರ ಕಾರ್ಯ ಶ್ಲಾಘನೀಯವಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ

# 2ಎ ಮೀಸಲಾತಿಗಾಗಿ 6ನೇ ಹಂತದ ಚಳುವಳಿ



■ವಿಜಯಸಾಕ್ಷಿ ಸುದ್ದಿ, ಗದಗ

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಅವಶ್ಯಕತೆ ಇರುವುದರಿಂದ ನಿರಂತರವಾಗಿ ಹೋರಾಟ ಮಾಡುತ್ತಲೇ ಬಂದಿದ್ದೇವೆ. ಆದರೆ, 3 ವರ್ಷಗಳು ಕಳೆದರೂ ಸಮಾಜಕ್ಕೆ ಮೀಸಲಾತಿ ಸಿಗದೆ ಇರುವದು ಬೇಸರ ಸಂಗತಿ. 6ನೇ ಹಂತದ ಚಳುವಳಿ ಅಕ್ಟೋಬರ್ 30ರಂದು ಪ್ರಾರಂಭಗೊಳ್ಳಲಿದ್ದು, ಅಂದು ಅಸುಂಡಿ ಗ್ರಾಮದ ಬಸವೇಶ್ವರ ದೇವಸ್ಥಾನದಿಂದ ಪಾದಯಾತ್ರೆ ಮೂಲಕ ಗದಗ ಜಿಲ್ಲೆ ಅಸುಂಡಿ ಕ್ರಾಸ್ ಬಳಿ ಹೆದ್ದಾರಿಯಲ್ಲಿ ನಡೆಯುವ ಇಷ್ಟಲಿಂಗ ಪೂಜೆಯೊಂದಿಗೆ ಹೋರಾಟ ಪ್ರಾರಂಭವಾಗಲಿದೆ ಎಂದು ಜಗದ್ಗುರು ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿಯವರು ಹೇಳಿದರು.

ಶನಿವಾರ ಗದುಗಿನ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಶ್ರೀಗಳು ಮಾತನಾಡಿದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಹಿರಿಯರ ಘಟಕದ ಅಧ್ಯಕ್ಷ ಅನಿಲಕುಮಾರ ಪಾಟೀಲ್, ಯುವ ಘಟಕದ ಅಧ್ಯಕ್ಷ ಅಯ್ಯಪ್ಪ ಮ. ಅಂಗಡಿ, ಗೌರವಾಧ್ಯಕ್ಷ ಮಹಾಂತೇಶ ನಲವಡಿ, ಈರಣ್ಣ ಬಾಳಿಕಾಯಿ, ಶಿವರಾಜಗೌಡ ಹಿರೇಮನಿಪಾಟೀಲ, ವಸಂತ ಪಡಗದ, ಬಸವರಾಜ ದೇಸಾಯಿ, ರಮೇಶ ರೋಣದ, ಮಂಜುನಾಥ ಗುಡದೂರ, ಚೇತನ್ ಅಬ್ಬಿಗೇರಿ, ರಾಜು ಜಕ್ಕನಗೌಡ್ರ, ಪ್ರಮೋದ ಮಾನೇದ, ಬಿ.ಬಿ ಸೂರಪ್ಪಗೌಡರ, ಬಸವರಾಜ ಮನಗುಂಡಿ, ಸಂಗಮೇಶ ಹುಣಸೀಕಟ್ಟಿ, ಸಿದ್ದು ಪಾಟೀಲ, ಗದಗ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸ್ವಾತಿ ಅಕ್ಕಿ, ಈರಮ್ಮ ತಾಳಿಕೋಟಿ ಸೇರಿದಂತೆ ಸಮಾಜ ಬಾಂಧವರು ಉಪಸ್ಥಿತರಿದ್ದರು.

# ನಿಧನರಾದ ಎಂ.ಕೆ ಅಬ್ಬಿಗೇರಿಯವರ ನೇತ್ರದಾನ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ನಿವಾಸಿ ಮಂಜುನಾಥ ಕಲ್ಯಾಣಪ್ಪ ಅಬ್ಬಿಗೇರಿ(43) ಶುಕ್ರವಾರ ನಿಧನರಾದರು. ಅವರ ಕುಟುಂಬದವರು ಸಾಮಾಜಿಕ ಕಳಕಳಿಯೊಂದಿಗೆ ಮೃತರ ನೇತ್ರಗಳನ್ನು ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಮೂಲಕ ಹುಬ್ಬಳ್ಳಿಯ ಜೋಶಿ ನೇತ್ರಾಲಯಕ್ಕೆ ದಾನ ನೀಡಿದರು.

ಗದಗ-ಬೆಟಗೇರಿ ಲಯನ್ಸ್ ಕ್ಲಬ್ ನೇತ್ರದಾನ, ದೇಹದಾನ, ರಕ್ತದಾನದ ಬಗ್ಗೆ ಜನಜಾಗೃತಿ, ತಿಳುವಳಿಕೆ ಮೂಡಿಸುತ್ತ ಬಂದಿದ್ದು, ಜನತೆಯಲ್ಲಿ ಕ್ರಮೇಣ ತಿಳುವಳಿಕೆ ಬರುತ್ತಿದೆ. ದಾನ ಮಾಡಿದ ನೇತ್ರಗಳನ್ನು ಕಣ್ಣಿಲ್ಲದವರಿಗೆ ತಜ್ಞ ವೈದ್ಯರು ಕಸಿ ಮಾಡುವ ಮೂಲಕ ಅಂಧರೂ ಜಗತ್ತನ್ನು ನೋಡುವಂತಾಗುತ್ತದೆ. ಸಾವಿನ ನಂತರ ಮೃತ ವ್ಯಕ್ತಿ ಕಣ್ಣುಗಳನ್ನು ಮಣ್ಣಲ್ಲಿ ಮಣ್ಣು ಮಾಡದೆ, ಬೆಂಕಿಯಲ್ಲಿ ಸುಡದೆ, ಕಣ್ಣುಗಳನ್ನು ದಾನ ಮಾಡಲು ಕುಟುಂಬದವರು ಮುಂದಾಗಬೇಕು ಎಂದು ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಅಧ್ಯಕ್ಷ ರಮೇಶ ಶಿಗ್ಲಿ ಮನವಿ ಮಾಡಿಕೊಂಡಿದ್ದಾರೆ.

ನೇತ್ರದಾನದ ಸಂದರ್ಭದಲ್ಲಿ ಕ್ಲಬ್ ಖಜಾಂಚಿ ರಾಜಣ್ಣ ಮಲ್ಲಾಡದ, ನಗರಸಭಾ ಸದಸ್ಯ ಅನಿಲ ಅಬ್ಬಿಗೇರಿ, ಮಲ್ಲಿಕಾರ್ಜುನ ಶಿಗ್ಲಿ, ವಿಜಯಕುಮಾರ ಅಬ್ಬಿಗೇರಿ, ವಿಶ್ವನಾಥ ಬೇಲೇರಿ ಸೇರಿದಂತೆ ಕ್ಲಬ್‌ನ ಸದಸ್ಯರು ಉಪಸ್ಥಿತರಿದ್ದರು.



# ಬ್ಲೂಟೂತ್ ಬಳಸಿ ನಿಗಮ ಮಂಡಳಿ ಪರೀಕ್ಷೆ ಬರೆಯುತ್ತಿದ್ದ ನಕಲಿ ಅಭ್ಯರ್ಥಿ ಸೇರಿ ಮೂವರ ಬಂಧನ!

■ವಿಜಯಸಾಕ್ಷಿ ಸುದ್ದಿ, ಯಾದಗಿರಿ

ವಿವಿಧ ನಿಗಮ ಮಂಡಳಿಗಳ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುತ್ತಿದ್ದ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ಪರೀಕ್ಷೆ ಬರೆಯುತ್ತಿದ್ದ ನಕಲಿ ಅಭ್ಯರ್ಥಿ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ಸೇರಿದಂತೆ ಐದು ನಿಗಮ ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅಕ್ಟೋಬರ್ 28 ಮತ್ತು 29ರಂದು ಕೆಇಎ ಪರೀಕ್ಷೆ ನಡೆಸುತ್ತಿದೆ.

ರಾಜ್ಯಾದ್ಯಂತ ಇಂದು 350 ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದ್ದು, ಯಾದಗಿರಿಯ ಪರೀಕ್ಷಾ ಕೇಂದ್ರವೊಂದರಲ್ಲಿ ನಕಲು ಮಾಡುತ್ತಿದ್ದ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಂಧಿತ ಆರೋಪಿ ಅಫಜಲಪುರದವನು ಎಂದು ತಿಳಿದುಬಂದಿದೆ. ಆರೋಪಿಯನ್ನು ವಶಕ್ಕೆ ಪಡೆದಿರುವ ಪೊಲೀಸರು ಆತನ ಬಳಿಯಿದ್ದ ಬ್ಲೂಟೂತ್ ಡಿವೈಸ್, ಮೊಬೈಲ್ ಅನ್ನು ಜಪ್ತಿ ಮಾಡಿದ್ದಾರೆ.

## ನಿಧನ ವಾರ್ತೆ

# ರಿಯಾಜ್ ಅಹ್ಮದ್ ಅಬ್ದುಲ್ ಸತ್ತಾರ್ ಖಾಜಿ



**ಅಣ್ಣಿಗೇರಿ:** ಪಟ್ಟಣದ ಮೆಣಸಿನಕಾಯಿ ವ್ಯಾಪಾರಿ, ಖಾಜಿ ಓಣಿ ನಿವಾಸಿ ರಿಯಾಜ್ ಅಹ್ಮದ್ ಅಬ್ದುಲ್ ಸತ್ತಾರ್ ಖಾಜಿ (74) ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ.

ರಿಯಾಜ್ ಅಹ್ಮದ್ ಖಾಜಿ ಅವರ ನಿಧನಕ್ಕೆ ಪದ್ಮಶ್ರೀ ಪುರಸ್ಕೃತ ಕೃಷಿ ವಿಜ್ಞಾನಿ ಅಬ್ದುಲ್ ಖಾದರ್ ನಡಕಟ್ಟಿನ, ಶಾಸಕ ಎನ್. ಎಚ್. ಕೋನರಡ್ಡಿ, ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಕ್ರೆಡಲ್ ಮಾಜಿ ಅಧ್ಯಕ್ಷ ಷಣ್ಮುಖಪ್ಪ ಗುರಿಕಾರ, ಸ್ಥಳೀಯ ಅಂಜುಮನ್ ಸಂಸ್ಥೆಯ ಪದಾಧಿಕಾರಿಗಳು ಸೇರಿದಂತೆ ಗಣ್ಯರು ಶೋಕ ವ್ಯಕ್ತಪಡಿಸಿದ್ದಾರೆ.

ಮುಕ್ತಿಮಂದಿರ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರಿಂದ ಮಾಹಿತಿ

# ಲಿಂ. ಶ್ರೀ ರಂಭಾಪುರಿ ಜಗದ್ಗುರುಗಳ 41ನೇ ಪುಣ್ಯಾರಾಧನೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭೂ ಕೈಲಾಸ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಅ.31ರ ಮಂಗಳವಾರ ಲಿಂ. ಶ್ರೀ ರಂಭಾಪುರಿ ವೀರಗಂಗಾಧರ ಜಗದ್ಗುರುಗಳ 41ನೇ ಪುಣ್ಯಾರಾಧನೆ ಮಹೋತ್ಸವ ಮತ್ತು ಧರ್ಮಜಾಗೃತಿ ಸಮಾರಂಭ ಜರುಗಲಿದೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರು, ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ಅಧ್ಯಕ್ಷರಾದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಹೇಳಿದರು.

ಈ ಕುರಿತು ಮುಕ್ತಿಮಂದಿರ ಕ್ಷೇತ್ರದಲ್ಲಿ ಮಾಹಿತಿ ನೀಡಿದ ಶ್ರೀಗಳು, ಪುಣ್ಯಾರಾಧನೆ ಮಹೋತ್ಸವ ನಿಮಿತ್ತ ಅ.31ರಂದು ಪ್ರಾತಃಕಾಲ ಪಂಚಾಚಾರ್ಯರ ಧ್ವಜಾರೋಹಣ, ಲಿಂ.ಜ ವೀರಗಂಗಾಧರ ಭಗವತ್ಪಾಧರ ಕರ್ತೃ ಗದ್ದುಗೆಗೆ ಮಹಾ ಪೂಜೆ, ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದ ಬಳಿಕ ಪ್ರಸಾದ ಸೇವೆ ನಡೆಯುವುದು. ಅಂದು ಮಧ್ಯಾಹ್ನ 1ಕ್ಕೆ ವೀರಗಂಗಾಧರ ಶಿವಾಚಾರ್ಯರ ಮಹಾಮೂರ್ತಿಯ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಲಿದೆ. ಮಧ್ಯಾಹ್ನ 3ಕ್ಕೆ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಧರ್ಮಸಭೆ ಜರುಗಲಿದೆ ಎಂದರು.

ಸಚಿವರಾದ ಹೆಚ್.ಕೆ ಪಾಟೀಲ ಉದ್ಘಾಟಿಸುವರು. ಅತಿಥಿಗಳಾಗಿ ಸಂಸದ ಶಿವಕುಮಾರ ಉದಾಸಿ, ಶಾಸಕ ಡಾ.ಚಂದ್ರು ಲಮಾಣಿ, ಎಂ.ಆರ್ ಪಾಟೀಲ, ಎಸ್.ವಿ ಸಂಕನೂರ, ಮಾಜಿ ಸಂಸದ



ಮಂಜುನಾಥ ಕುನ್ನೂರ, ಮಾಜಿ ಶಾಸಕರಾದ ಜಿ.ಎಸ್ ಗಡ್ಡದೇವರಮಠ, ಜಿ.ಎಂ ಮಹಾಂತಶೆಟ್ಟರ, ರಾಮಣ್ಣ ಲಮಾಣಿ, ಕುಸುಮಾ ಶಿವಳ್ಳಿ, ಎಂ.ಎಸ್ ಅಕ್ಕಿ, ರಾಮಕೃಷ್ಣ ದೊಡ್ಡಮನಿ ಸೇರಿ ಪುರಸಭೆ ಸದಸ್ಯರು, ಮುಖಂಡರು, ಧರ್ಮಾಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಧರ್ಮಾಭಿಮಾನಿಗಳು ರೋಣ-ಕ್ಷೇತ್ರದ ಶಾಸಕ ಜಿ.ಎಸ್ ಪಾಟೀಲ ಅವರಿಗೆ 'ಶ್ರೀರಂಭಾಪುರಿ ಜಗದ್ಗುರು ವೀರಗಂಗಾಧರ ಪ್ರಶಸ್ತಿ' ಪ್ರದಾನ ಮಾಡಲಾಗುವದು ಎಂದು ತಿಳಿಸಿದರು.

ಈ ವೇಳೆ ಮುಕ್ತಿಮಂದಿರದ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದ ಕಲಾದಗಿ ಪಂಚಗ್ರಹ ಹಿರೇಮಠದ ಲಿಂ. ಶ್ರೀ ಚಂದ್ರಶೇಖರ ಶಿವಾಚಾರ್ಯರ 8ನೇ ಪುಣ್ಯಸ್ಮರಣೋತ್ಸವ ನೆರವೇರಿಸಲಾಗುವುದು. ಕಾರಣ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಎಂದು ಮುಕ್ತಿಮಂದಿರ ಶ್ರೀಗಳು ಹೇಳಿದರು. ಕಲಾದಗಿಯ ಗಂಗಾಧರ ಶಿವಾಚಾರ್ಯರು ಇದ್ದರು.

> ಕಾರ್ಯಕ್ರಮದಲ್ಲಿ ಮುಕ್ತಿಮಂದಿರ ಶ್ರೀಮಠದ ಪಟ್ಟಾಧ್ಯಕ್ಷರಾದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳು ನೇತೃತ್ವ ಮತ್ತು ನೊಣವಿನಕೆರೆ ಕಾಡಸಿದ್ದೇಶ್ವರಮಠದ ಡಾ. ಕರಿಬಸವ ರಾಜೇಂದ್ರ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸುವರು. ಧರ್ಮಸಭೆಯಲ್ಲಿ ಬಂಕಾಪೂರ, ಮಳಲಿಮಠ, ಸುಳ್ಳ, ಎಮ್ಮಿಗನೂರ, ಹೊಸಪೇಟೆ, ಲಕ್ಷ್ಮೇಶ್ವರ, ಕಲಾದಗಿ, ಮಳಲಿ, ಚಳಗೇರಿ, ಸಿದ್ಧರಬೆಟ್ಟ, ಕಣ್ವಕುಪ್ಪೆ, ಬನ್ನಿಕೊಪ್ಪ, ಬಿಲ್‌ಕೆರೂರ, ಗಿರಿಸಾಗರ ಶ್ರೀಗಳು ಸೇರಿ ಅನೇಕ ಹರಗುರುಚರ ಮೂರ್ತಿಗಳು ಉಪಸ್ಥಿತರಿರುವರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka